# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಗುರುವಾರ, ಅಕ್ಟೋಬರ್ 24, 2024

ಸಂಪುಟ : 51 ಸಂಚಿಕೆ : 161 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

## ರಾಜಧನ ಸೋರಿಕೆ ತಡೆಗಟ್ಟಬೇಕು ಸಾಮಾನ್ಯರಿಗಾಗುವ ತೊಂದರೆ ತಪ್ಪಿಸಿ



### ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಗಣಿ ಮತ್ತು ಭೂ ವಿಜ್ಞಾನ ಖಾತೆ ಸಚಿವ ಎಸ್ಸೆಸ್ಸೆಂ

ಬೆಂಗಳೂರು, ಅ. 23 - ಗಣಿ ಮಾಲೀಕರು ಸರ್ಕಾರ ಹಾಗೂ ಘನ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಸಮರ್ಪಕವಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ರಾಜಧನವನ್ನು ಸಂಗ್ರಹ ಮಾಡಬೇಕು ಎಂದು ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನಿರ್ದೇಶಿಸಿದರು.

ಇಲ್ಲಿನ ತಮ್ಮ ಕಚೇರಿಯಲ್ಲಿ ಇಂದು ಹಮ್ಮಿಕೊಂಡಿದ್ದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸಂಬಂಧ ಪಟ್ಟ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎ.ಎಸ್.ಪಿ ಯೋಜನೆಯಿಂದ ತೆರಿಗೆ ಕಟ್ಟಲು ಗಣಿ ಮಾಲೀಕರುಗಳಿಗೆ ಸಮಸ್ಯೆಯಾಗುತ್ತಿದೆ, ಸಿಮೆಂಟ್ ಕಂಪನಿಯವರಿಗೆ ಜಿ.ಎಸ್.ಟಿ.ಯಿಂದ ತೊಂದರೆಯಾಗಿದೆ ಎನ್ನುವ ದೂರು ಕೇಳಿ ಬಂದಿದೆ. ಅಧಿಕಾರಿಗಳು ಸಂಬಂಧ ಪಟ್ಟವರ ಕುಂದು ಕೊರತೆಗಳನ್ನು ಆಲಿಸಬೇಕು ಎಂದರು.

2019-20 ರಿಂದ 2024-25ನೇ ಸೆಪ್ಟೆಂಬರ್ ರವರೆಗೆ ಮುಖ್ಯ ಖನಿಜ ಹಾಗೂ ಉಪ ಖನಿಜಗಳಿಗೆ ಸಂಬಂಧಿಸಿದಂತೆ ವಸೂಲಾಗಿರುವ ರಾಜಧನದ ರಾಜಸ್ವ ಸಂಗ್ರಹಣೆ ತ್ವರಿತಗತಿಯಲ್ಲಿ ಸಾಗಬೇಕು ಎಂದು ತಿಳಿಸಿದ ಸಚಿವರು, ಪರಿಸರ ವಿಮೋಚನಾ ಪ್ರಮಾಣ ಪತ್ರಕ್ಕೆ ಅನುಗುಣವಾಗಿ ಕಲ್ಲು ಗಣಿ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಪಡೆದರು.

ಪರಿಸರ ವಿಮೋಚನಾ ಪತ್ರ ಪಡೆದ ಪ್ರಮಾಣಕ್ಕೂ, ಪರ್ಮಿಟ್ ನೀಡಿದ ಪ್ರಮಾಣಕ್ಕೂ ಮತ್ತು ಸರ್ಕಾರಿ ಕಾಮಗಾರಿಗಳಲ್ಲಿ ಬಳಸಬೇಕಾದ ಪ್ರಮಾಣಕ್ಕೂ ಹಾಗೂ ಪರ್ಮಿಟ್ ಪಡೆದ ಪ್ರಮಾಣ ಸಂಗ್ರಹದಲ್ಲಿ ಗಣಿ ಇಲಾಖೆ ವ್ಯಾಪ್ತಿಯ ರಾಜಧನ ಸೋರಿಕೆಯನ್ನು ತಡೆಗಟ್ಟುವುದರ ಜೊತೆ ಜೊತೆಗೆ ಜನಸಾಮಾನ್ಯರಿಗೂ ಕೂಡ ತೊಂದರೆ ಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ರಾಜ್ಯದ ಯಾವ ಯಾವ ಭಾಗಗಳಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸಂಬಂಧ ಪಟ್ಟಂತೆ ಸಮಸ್ಯೆಗಳಿವೆಯೋ ಅವುಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶವನ್ನು ಸಚಿವರು ನೀಡಿದರು.

ಈ ಸಂದರ್ಭದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರು ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ನಗರದಲ್ಲಿ ಶೀಘ್ರ ರಾಣಿ ಚೆನ್ನಮ್ಮ ಪ್ರತಿಮೆ

### ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮದಲ್ಲಿ ಸಂಸದೆ ಪ್ರಭಾ ಮಲ್ಲಿಕಾರ್ಜುನ್

ದಾವಣಗೆರೆ, ಅ. 23 - ಶೀಘ್ರದಲ್ಲೇ ನಗರದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆ ಸ್ಥಾಪಿಸಲಾಗುವುದು ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ನಗರದ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಪಾಲಿಕೆ, ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜ, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತುಗಳ ಸಂಯುಕ್ತಾಶ್ರಯದಲ್ಲಿ ಇಂದು ಆಯೋಜಿಸಲಾಗಿದ್ದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಹಾಗೂ ವಿಜಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಸ್ಥಳೀಯ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ (ಅರುಣ ಸರ್ಕಲ್) ಸ್ಥಾಪಿಸಲು ಉದ್ದೇಶಿಸಿರುವ ರಾಣಿ ಚೆನ್ನಮ್ಮ ಪ್ರತಿಮೆ ಈಗಾಗಲೇ ಸಿದ್ಧವಾಗಿದೆ. ಆದರೆ, ಮೂರ್ತಿಯ ಕೆತ್ತನೆ ಸರಿಯಾಗಿ ಆಗಿಲ್ಲ ಎಂಬ ದೂರಿದೆ. ಎಲ್ಲರೂ ಈ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ. ಶೀಘ್ರದಲ್ಲೇ ಪ್ರತಿಮೆ ಸ್ಥಾಪನೆಯಾಗಲಿದೆ ಎಂದರು.

ರಾಣಿ ಚೆನ್ನಮ್ಮ ಸ್ವಾರ್ಥ ಮರೆತು ರಾಜ್ಯ ರಕ್ಷಣೆಗೆ ದಿಟ್ಟ ನಿರ್ಧಾರ ತೆಗೆದುಕೊಂಡಿದ್ದರು. ಅವರ ಜೀವನ ಶೋಷಣೆ (3ನೇ ಪುಟಕ್ಕೆ)



### ಮೀಸಲಾತಿಗೆ ಕುಂಟು ನೆಪ: ಅಜಯ್

ಪಂಚಮಸಾಲಿ ಸಮುದಾಯದವರು 1994ರಿಂದಲೂ 2ಎ ಮೀಸಲಾತಿಗೆ ಹೋರಾಟ ನಡೆಸುತ್ತಿದ್ದಾರೆ. ಇನ್ನೂ ನ್ಯಾಯ ಸಿಕ್ಕಿಲ್ಲ ಎಂದು ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್ ವಿಷಾದಿಸಿದರು.

ಮೀಸಲಾತಿಗಾಗಿ ಇತ್ತೀಚೆಗೆ ಸಮಾಜದ ವಕೀಲರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ, ಚುನಾವಣಾ ನೀತಿ ಸಂಹಿತೆ ಇದೆ ಎಂಬ ಕುಂಟು ನೆಪ ಹೇಳಿದ್ದಾರೆ ಎಂದು ಟೀಕಿಸಿದರು.

### ಭಾರತ ರತ್ನ - ರಾಷ್ಟ್ರಮಾತೆ

ಕಿತ್ತೂರು ರಾಣಿ ಚೆನ್ನಮ್ಮ ಅವರ ಸಾಹಸ, ಕರುಣೆ, ದಯೆ ಹಾಗೂ ದೇಶಪ್ರೇಮ ಎಲ್ಲರಿಗೂ ಆದರ್ಶ. ಅವರಿಗೆ ಕೇಂದ್ರ ಸರ್ಕಾರ ಭಾರತ ರತ್ನ ಪ್ರಶಸ್ತಿ ನೀಡಬೇಕು ಎಂದು ಪಾಲಿಕೆ ಮೇಯರ್ ಚಮನ್ ಸಾಬ್ ಒತ್ತಾಯಿಸಿದರು.

ವಚನಗಾರ್ತಿ ಅಕ್ಕ ಮಹಾದೇವಿ ಅವರನ್ನು ನಾಡಿನ ಜನತೆ ಅಕ್ಕ ಎಂದು ಗೌರವಿಸುತ್ತಾರೆ. ಅದೇ ರೀತಿ ವೀರ ವನಿತೆ ರಾಣಿ ಚೆನ್ನಮ್ಮ ಅವರನ್ನು ಅವ್ವ ಎಂದು ಗೌರವಿಸುತ್ತಾರೆ. ಚೆನ್ನಮ್ಮ ಅವರು ರಾಷ್ಟ್ರಮಾತೆ ಎಂದು ಉಪ ಮೇಯರ್ ಸೋಗಿ ಶಾಂತಕುಮಾರ್ ಹೇಳಿದರು.



# ಕೂಡಲೇ ಒಳ ಮೀಸಲಾತಿ ಜಾರಿಗಾಗಿ ಆಗ್ರಹ

### ಜಿಲ್ಲಾ ಛಲವಾದಿ ಮಾದಿಗ ಸಮುದಾಯಗಳ ಒಕ್ಕೂಟದಿಂದ ಬೃಹತ್ ಪ್ರತಿಭಟನೆ

ದಾವಣಗೆರೆ, ಅ.23- ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಆದೇಶದ ಅನ್ವಯ ಕೂಡಲೇ ಒಳ ಮೀಸಲಾತಿ ಜಾರಿ ಮಾಡುವಂತೆ ಆಗ್ರಹಿಸಿ ದಾವಣಗೆರೆ ಜಿಲ್ಲಾ ಛಲವಾದಿ, ಮಾದಿಗ ಸಮುದಾಯಗಳ ಒಕ್ಕೂಟದ ವತಿಯಿಂದ ಇಂದು ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಛಲವಾದಿ-ಮಾದಿಗ ಸಮುದಾಯಗಳ ಒಕ್ಕೂಟದ ಪದಾಧಿಕಾರಿಗಳು ನಗರದ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಬೃಹತ್ ಪ್ರತಿಭಟನೆಗೆ ಚಾಲನೆ ನೀಡಿದರು.

ಜಯದೇವ ವೃತ್ತ, ಅಶೋಕ ರಸ್ತೆ, ಗಾಂಧಿವೃತ್ತದ ಮೂಲಕ ಉಪವಿಭಾಗಾಧಿಕಾರಿಗಳ ಕಚೇರಿವರೆಗೆ ಮೆರವಣಿಗೆ ನಡೆಸಿ, ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಇದೇ ವೇಳೆ ದಲಿತ ಸಂಘರ್ಷ ಸಮಿತಿ ಮುಖಂಡ ಎಂ. ಗುರುಮೂರ್ತಿ ಮಾತನಾಡಿ, ಪರಿಶಿಷ್ಟ ಪಟ್ಟಿಯಲ್ಲಿರುವ 101 ಜಾತಿಗಳಲ್ಲಿ ಅಸಮಾನತೆ ಕಂಡು ಬರುತ್ತಿದೆ. ಮೀಸಲಾತಿ ಕೆಲವರಿಗೆ ಮಾತ್ರ ಇತ್ತು. ಕರ್ನಾಟಕದಲ್ಲಿ ಮಾದಿಗ ಸಮುದಾಯದ ಜನಸಂಖ್ಯೆ ಆಧಾರದಲ್ಲಿ ಒಳ ಮೀಸಲಾತಿ ವರ್ಗೀಕರಣ ಮಾಡಲು ಒತ್ತಾಯಿಸಿ ಕಳೆದ ಮೂರು ದಶಕಗಳಿಂದ ನಿರಂತರವಾಗಿ ನಡೆಸಿದ ಹೋರಾಟದ ಫಲವಾಗಿ ಈಗ ಒಳ ಮೀಸಲಾತಿ ಅನುಷ್ಠಾನದ ಸಮಯ ಬಂದಿದೆ.

ಸರ್ವೋಚ್ಚ ನ್ಯಾಯಾಲಯದ ಸಾಂವಿಧಾನಿಕ ಪೀಠ ಅ. 1 ರಂದು ಒಳ ಮೀಸಲಾತಿ ಕಲ್ಪಿಸುವ ಅಧಿಕಾರ ಮತ್ತು ಹೊಣೆಗಾರಿಕೆಯನ್ನು ಆಯಾ ರಾಜ್ಯ ಸರ್ಕಾರಗಳಿಗೆ ಇದೆ ಎಂಬುದನ್ನು ತೀರ್ಪಿನಲ್ಲಿ ಸ್ಪಷ್ಟವಾಗಿ ತಿಳಿಸಿದೆ. ಈ ತೀರ್ಪಿನ ಅನ್ವಯ ಕೂಡಲೇ ಒಳ ಮೀಸಲಾತಿ ಸೌಲಭ್ಯ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಒಳ ಮೀಸಲಾತಿ ಜಾರಿಗೆ ಕೆಲವು ಸಮುದಾಯದ ಮುಖಂಡರು ಅಡ್ಡಿಪಡಿಸುತ್ತಿದ್ದಾರೆ. ಸಿಎಂ ಸಿದ್ಧರಾಮಯ್ಯ ಅವರಿಗೆ ತಪ್ಪು ಮಾಹಿತಿ ನೀಡುವ ಮೂಲಕ ತಡೆಯುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇಂತಹ ಒತ್ತಡಗಳಿಗೆ ಮಣಿಯದೇ ಸಿಎಂ ಒಳ ಮೀಸಲಾತಿ ಜಾರಿಗೆ (2ನೇ ಪುಟಕ್ಕೆ)

# ಇಸ್ರೋಗಿದೆ ತಂತ್ರಜ್ಞಾನ ಉತ್ತೇಜಿಸುವ ಗುರಿ

### ಸ್ಪೇಸ್ ಆನ್‌ವ್ಹೀಲ್ಸ್ ಪ್ರದರ್ಶನದಲ್ಲಿ ಇಸ್ರೋ ವಿಜ್ಞಾನಿ ಪಿ.ವಿ.ಎನ್.ಮೂರ್ತಿ

ದಾವಣಗೆರೆ, ಅ.23- ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು ವಿಜ್ಞಾನ ಮತ್ತು ತಂತ್ರಜ್ಞಾನ ಉತ್ತೇಜಿಸುವ ಗುರಿ ಮತ್ತು ಉದ್ದೇಶ ಹೊಂದಿದ್ದು, ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಂಡು ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಬೇಕೆಂದು ಇಸ್ರೋ ವಿಜ್ಞಾನಿ ಪಿ.ವಿ.ಎನ್.ಮೂರ್ತಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಬುಧವಾರ ಇಸ್ರೋ ಮತ್ತು ಶ್ರೀ ಸತ್ಯಸಾಯಿ ವಿದ್ಯಾವಾಹಿನಿ ಜಂಟಿಯಾಗಿ ಆಯೋಜಿಸಿದ್ದ ಸ್ಪೇಸ್ ಆನ್‌ವ್ಹೀಲ್ಸ್ ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಗ್ಗೆ ಹೆಚ್ಚು ಹೆಚ್ಚು ಜ್ಞಾನ ಸಂಪಾದಿಸುವ ಮೂಲಕ ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚು ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಪಂಚಾಯ್ತಿ ಸಿಇಓ ಸುರೇಶ್ ಬಿ.ಇಟ್ನಾಳ್, ನಮ್ಮ ಸಂವಿಧಾನದ ಮೂಲಭೂತ ಕರ್ತವ್ಯಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವುದು ಒಂದಾಗಿದೆ ಎಂದು ಹೇಳಿದರು.

### ಮಕ್ಕಳೊಂದಿಗೆ ಸಂವಾದ...

ಸ್ಪೇಸ್ ಆನ್ ವ್ಹೀಲ್ಸ್ ಪ್ರದರ್ಶನ ಕಾರ್ಯಕ್ರಮದಲ್ಲಿ ದಾವಣಗೆರೆಯ ವಿವಿಧ ಶಾಲೆಗಳಿಂದ ಸುಮಾರು 3000 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸ್ಪೇಸ್ ಆನ್ ವ್ಹೀಲ್ಸ್ ಪ್ರದರ್ಶನ ಕಾರ್ಯಕ್ರಮದಲ್ಲಿ ಮಕ್ಕಳು ಇಸ್ರೋ ಪ್ರಾರಂಭವಾದಾಗಿನಿಂದ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅವುಗಳ ಪ್ರಾಯೋಗಿಕ ಅನ್ವಯಗಳ ಕ್ಷೇತ್ರಗಳಲ್ಲಿ ದೇಶವು ಮಾಡಿದ ಪ್ರಮುಖ ಪ್ರಗತಿಗಳನ್ನು ಸ್ಪೇಸ್ ಆನ್ ವ್ಹೀಲ್ಸ್ ಸಂಚಾರಿ ಪ್ರದರ್ಶನ ಬಸ್‌ನ ಮೂಲಕ ವಿವಿಧ ಸ್ಥಳಗಳಿಗೆ ಪ್ರಯಾಣಿಸಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಬಾಹ್ಯಾಕಾಶ ಸಂಶೋಧನೆ ಮತ್ತು ಇಸ್ರೋದ ಸಾಧನೆಗಳ ಬಗ್ಗೆ ಉಪಯುಕ್ತ ಮಾಹಿತಿ ನೀಡಲಾಯಿತು. ನಂತರ ಇಸ್ರೋದ ವಿಜ್ಞಾನಿಗಳೊಂದಿಗೆ ಶಾಲಾ ವಿದ್ಯಾರ್ಥಿಗಳು ಸಂವಾದದ ಮೂಲಕ ಮಾಹಿತಿ ಪಡೆದುಕೊಂಡರು.

ಈಶ್ವರಮ್ಮ ಶಾಲಾಡಳಿತ ಮಂಡಳಿ ಅಧ್ಯಕ್ಷರಾದ ಕೆ.ಆರ್.ಸುಜಾತಕೃಷ್ಣ ಮಾತನಾಡಿ, ಸಮಾಜ ನಮಗೇನು ಕೊಟ್ಟಿದೆ ಎಂದು ಕೇಳುವ ಬದಲು ಸಮಾಜಕ್ಕಾಗಿ ನಾವೇನು ಕೊಡುಗೆ ಕೊಟ್ಟಿದ್ದೇವೆ ಎಂದು ಚಿಂತಿಸಬೇಕೆಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಇಸ್ರೋದ ಹಿರಿಯ ವಿಜ್ಞಾನಿ ಪಿ.ವಿ.ಎನ್. ಮೂರ್ತಿ ಅವರನ್ನು ಗೌರವಿಸಲಾಯಿತು.

ಡಿಡಿಪಿಐ ಜಿ.ಕೊಟ್ರೇಶ್, ತಹಶೀಲ್ದಾರ್ ಡಾ. ಅಶ್ವತ್ಥ್, ಈಶ್ವರಮ್ಮ ಟ್ರಸ್ಟ್ ಅಧ್ಯಕ್ಷರಾದ ಎ.ಆರ್. ಉಷಾರಂಗನಾಥ್, ಕಾರ್ಯದರ್ಶಿ ಜಿ.ಆರ್. ವಿಜಯಾನಂದ್, ಈಶ್ವರಮ್ಮ ಶಾಲಾಡಳಿತ ಮಂಡಳಿ ಖಜಾಂಚಿ ಎ.ಪಿ.ಸುಜಾತ, ಖಾಸಗಿ ಶಾಲಾಡಳಿತ ಮಂಡಳಿಯ ಕಾರ್ಯದರ್ಶಿ ಕೆ. ಎಸ್.ಮಂಜುನಾಥ್, ಶ್ರೀ ಸತ್ಯಸಾಯಿ ವಿದ್ಯಾ ವಾಹಿನಿಯ ಸಂಚಾಲಕರಾದ ಸುಬ್ರಮಣ್ಯ, ಗೌತಮ್, ವೆಂಕಟೇಶ್ ಬಡಿಗೇರ್, ಈಶ್ವರಮ್ಮ ಶಾಲೆಯ ಪ್ರಾಂಶುಪಾಲ ಕೆ.ಎಸ್.ಪ್ರಭುಕುಮಾರ್, ಉಪ ಪ್ರಾಂಶುಪಾಲರಾದ ಜಿ.ಎಸ್.ಶಶಿರೇಖಾ ಇದ್ದರು. ಶಿಕ್ಷಕಿ ರಂಜನಿ ಸ್ವಾಗತಿಸಿದರು. ವಿ. ಸುನೀತಾ ನಿರೂಪಿಸಿದರು. ಕೆ.ಎಸ್. ಪ್ರಭುಕುಮಾರ್ ವಂದಿಸಿದರು.





## ಹರಿದು ಬಂದ ಹಳ್ಳ ತುಂಬಿದ ಹೊನ್ನೂರು ಕೆರೆ

ದಾವಣಗೆರೆ, ಅ.23- ಮೊನ್ನೆ ಸತತವಾಗಿ ಸುರಿದ ಮಳೆಯಿಂದಾಗಿ ದಾವಣಗೆರೆ ತಾಲ್ಲೂಕಿನ ಆನಗೋಡು ಹೋಬಳಿಯ ರಾಷ್ಟ್ರೀಯ ಹೆದ್ದಾರಿ 48ರ ಹತ್ತಿರದ ಹಳ್ಳದ ನೀರು ಹರಿದು ಹೊನ್ನೂರು ಕೆರೆಗೆ ಭರ್ತಿಯಾಗುತ್ತಿದ್ದು, ಈ ದೃಶ್ಯವನ್ನು ಕಣ್ತುಂಬಿಕೊಳ್ಳಲು ಹೊನ್ನೂರು, ಮಲ್ಲಶೆಟ್ಟಿಹಳ್ಳಿ ಮತ್ತು ಕೊಗ್ಗನೂರು ಸೇರಿದಂತೆ ಆ ಭಾಗದ ಜನರು ತಂಡೋಪತಂಡವಾಗಿ ಬರುತ್ತಿರುವುದು ಕಂಡು ಬಂದಿರುತ್ತದೆ.



ಈ ಹಿಂದ ಬಂದ ಮಳೆ ಬೆಳೆಗಳಷ್ಟೆ ಸೀಮಿತವಾಗಿತ್ತು. ಕಳೆದ 3 ತಿಂಗಳಿನಿಂದ ಹಳ್ಳ ಹರಿಯುವ ಹಾಗೆ ಮಳೆಯಾಗಿರಲಿಲ್ಲ. ಚಿತ್ತಾ ಮಳೆ ಬಂದಿತ್ತಾದರೂ ಹಳ್ಳ ಹರಿದು ಬಂದಿರಲಿಲ್ಲ. ಆದರೆ, ಕಳೆದ ಸ್ವಲ್ಪ ದಿನಗಳಿಂದ ಬರುತ್ತಿರುವ ಮಳೆಯಿಂದಾಗಿ ಹಳ್ಳ ಹರಿಯುತ್ತಿರುವುದು ಈ ಭಾಗದ ಜನರ ಹರ್ಷಕ್ಕೆ ಕಾರಣವಾಗಿದೆ.

ಈ ಹಿಂದೆ ಮಳೆ ಸರಿಯಾಗಿ ಬಾರದೇ ಇರುವುದರಿಂದ 400 ಎಕರೆ ವಿಸ್ತೀರ್ಣದ ಹೊನ್ನೂರು ಕೆರೆ ಖಾಲಿ ಉಳಿದಿತ್ತು. ಇದರಿಂದ ದನ-ಕರುಗಳಿಗೆ ನೀರಿನ ಅಭಾವ ಉಂಟಾಗಿತ್ತು. ಆದರೆ ಈಗ ಆ ಸಮಸ್ಯೆಗೆ ತೆರೆ ಬಿದ್ದಿದೆ. (3ನೇ ಪುಟಕ್ಕೆ)

## ಪೌರಾಯುಕ್ತರ ವಿರುದ್ಧ ಅಧ್ಯಕ್ಷರು, ಸದಸ್ಯರ ಪ್ರತಿಭಟನೆ



### ಹರಿಹರ ನಗರಸಭೆಯ ಇತಿಹಾಸದಲ್ಲೇ ನಡೆದ ಘಟನೆ

> ಜಿಲ್ಲಾಧಿಕಾರಿಗಳು ದಾವಣಗೆರೆ ನಗರಕ್ಕೆ ಮಾತ್ರ ಜಿಲ್ಲಾಧಿಕಾರಿಗಳಾಗಿರುವ ಕಾರಣ, ಜಿಲ್ಲೆಯ ಇತರೆ ತಾಲ್ಲೂಕುಗಳ ಸಮಸ್ಯೆಗಳು ಉದ್ಭವಿಸುತ್ತಿವೆ.
>
> - ದಾದಾ ಖಲಂದರ್, ನಗರಸಭೆ ಸದಸ್ಯ

ಹರಿಹರ, ಅ. 23 - ನಗರಸಭೆ ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಅವರು ನಗರಸಭೆ ಅಧ್ಯಕ್ಷರು ಮತ್ತು ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಏಕಪಕ್ಷೀಯವಾಗಿ ನಡೆದುಕೊಳ್ಳುತ್ತಾರೆ. ಬೆಳಗ್ಗೆ ಕಚೇರಿಯಲ್ಲಿ ಕೆಲಸ ಮಾಡದೇ ಕತ್ತಲಿನಲ್ಲಿ ಕೆಲಸ ಮಾಡುತ್ತಿದ್ದು, ಸರ್ಕಾರ ಇವರನ್ನು ವರ್ಗಾವಣೆ ಮಾಡುವಂತೆ ಆಗ್ರಹಿಸಿ ನಗರ ಸಭೆ ಅಧ್ಯಕ್ಷರಾದ ಕವಿತ ಮಾರುತಿ ಮತ್ತು ಸದಸ್ಯರಾದ ಆರ್.ಸಿ. ಜಾವೇದ್ ದಾದಾ ಖಲಂದರ್, ಬಿ. ಅಲ್ತಾಫ್ ಹಾಗೂ ಇತರೆ ಸದಸ್ಯರು ಪ್ರತಿಭಟನೆ ನಡೆಸಿದ ಘಟನೆ ನಗರಸಭೆ ಮುಂಭಾಗದಲ್ಲಿ ಇಂದು ನಡೆಯಿತು.

ಈ ವೇಳೆ ನಗರ ಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್ ಮಾತನಾಡಿ, ಪೌರಾಯುಕ್ತರು ಜನರ ಸಮಸ್ಯೆಗಳ ವಿಚಾರಕ್ಕೆ ನಮ್ಮ ಬಳಿ ಚರ್ಚೆ ಮಾಡುತ್ತಿಲ್ಲ. ನಾವೇ ಅವರ ಬಳಿ ಚರ್ಚೆ ಮಾಡುವುದಕ್ಕೆ ಬೆಳಿಗ್ಗೆಯಿಂದ ಸಂಜೆಯವರೆಗೆ ಕಚೇರಿಯಲ್ಲಿ ಕುಳಿತುಕೊಂಡು ಕಾದರೂ ಅವರು ನಾವು ಮನೆಗೆ ಹೋದ ನಂತರ ಕಚೇರಿಗೆ ಬಂದು ತಡ ರಾತ್ರಿಯವರೆಗೂ ಕೆಲಸ ಮಾಡುತ್ತಾರೆ. ಸಮಸ್ಯೆಗಳನ್ನು ಹೇಳಿಕೊಂಡು ಬರುವ ಸಾರ್ವಜನಿಕರಿಗೆ ಯಾವ ರೀತಿಯಲ್ಲಿ ಉತ್ತರ ಕೊಡಬೇಕು, ಇದನ್ನು ಅವರಿಗೆ ಹಲವಾರು ಬಾರಿ ಹೇಳಿದರೂ ಸಹ ಅವರು ದಿನದಿಂದ ದಿನಕ್ಕೆ ಇನ್ನಷ್ಟು ಉದ್ಧಟತನದಿಂದ ವರ್ತಿಸುತ್ತಿದ್ದಾರೆ. ಇದರಿಂದ ಬೇಸತ್ತು ಅನಿವಾರ್ಯವಾಗಿ ಕಚೇರಿ ಮುಂದೆ ಪ್ರತಿಭಟನೆ ಮಾಡುತ್ತಿರುವುದಾಗಿ ತಿಳಿಸಿದರು.

ನಗರಸಭೆ ಸದಸ್ಯ ಆರ್.ಸಿ. ಜಾವೇದ್ ಮಾತನಾಡಿ, ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಅವರ ಅನುಚಿತ ನಡವಳಿಕೆಯ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗುತ್ತದೆ ಎಂದು ಹೇಳಿದರು.

ನಗರಸಭೆ ಸದಸ್ಯ ದಾದಾ ಖಲಂದರ್ ಮಾತನಾಡಿ, ಜಿಲ್ಲಾಧಿಕಾರಿಗಳು ದಾವಣಗೆರೆ ನಗರಕ್ಕೆ ಮಾತ್ರ ಸೀಮಿತವಾಗಿದ್ದಾರೆ. ಜಿಲ್ಲಾಧಿಕಾರಿಗಳು ಜಿಲ್ಲೆಯ ಇತರೆ ತಾಲ್ಲೂಕಿನ ಜನರಿಗೆ ಸ್ಪಂದಿಸದಿರುವುದರಿಂದ ಹರಿಹರದ ಸಮಸ್ಯೆಗಳು ಉಲ್ಬಣಗೊಳ್ಳುತ್ತಿವೆ ಎಂದು (3ನೇ ಪುಟಕ್ಕೆ)

## ಪ್ರಿಯಾಂಕ ಗಾಂಧಿ ನಾಮಪತ್ರ ಸಲ್ಲಿಕೆ

ವಯನಾಡ್, ಅ. 23 - ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರ ಅವರು ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. (3ನೇ ಪುಟಕ್ಕೆ)

MEETAKSHARA
Lifestyle Exhibition
DEEPAVALI & WEDDING EDIT
23rd October, 2024
Hotel Southern Star
Shamanur Road, Kuvempu Nagar
Davanagere-577004.
Exciting EARLY BIRD PRIZE LUCKY DIP
- 1st Prize - Saree worth Rs. 5000/-
- 2nd Prize - Saree worth Rs. 3000/-
- 3rd Prize - Saree worth Rs. 2000/-
Hurry!! Don't miss out on this exclusive showcase!

# ಮನುಕುಲ ಇರುವವರೆಗೂ ವಾಲ್ಮೀಕಿ ಚಿಂತನೆ ಜೀವಂತ

## ಹಾರಕನಾಳು ಗ್ರಾಮದಲ್ಲಿನ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ವರಸದ್ಯೋಜಾತ ಸ್ವಾಮೀಜಿ



**ಹರಪನಹಳ್ಳಿ**

ಹರಪನಹಳ್ಳಿ,ಅ. 23- ಮಹರ್ಷಿ ವಾಲ್ಮೀಕಿ ಯವರ ಕೊಡುಗೆಗಳು ಧಾರ್ಮಿಕ ಕ್ಷೇತ್ರವನ್ನು ಮೀರಿ, ಭಾರತದ ಕಲೆ, ಸಂಸ್ಕೃತಿ ಮತ್ತು ಸಾಮಾಜಿಕ ಮೌಲ್ಯಗಳನ್ನು ಆಳವಾಗಿ ಪ್ರಭಾವಿಸುತ್ತವೆ. ಭಾರತಕ್ಕೆ ಸಂಸ್ಕೃತಿ ಕೊಟ್ಟ ಏಕಮೇವ ಕವಿ ವಾಲ್ಮೀಕಿ ಆಗಿದ್ದಾರೆ. ಮನುಕುಲ ಇರುವವರೆಗೂ ವಾಲ್ಮೀಕಿ ಚಿಂತನೆ ಜೀವಂತವಾಗಿರುತ್ತದೆ ಎಂದು ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಹಾರಕನಾಳು ಗ್ರಾಮದ ಕಲಾಮಂದಿರದಲ್ಲಿ ಜರುಗಿದ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ಮಹರ್ಷಿ ವಾಲ್ಮೀಕಿ ಈ ದೇಶಕ್ಕೆ, ನಾಡಿಗೆ ಬಹುಮುಖ್ಯವಾದ ಕೊಡುಗೆಯನ್ನು ನೀಡಿದ್ದಾರೆ. ರಾಮಾಯಣವು ಮನುಷ್ಯನನ್ನು ಬದಲಾವಣೆ ಮಾಡುವ ಬಹುಮುಖ್ಯ ಗ್ರಂಥವಾಗಿದೆ. ಆದರೆ, ಇಂದಿನ ಸಮಾಜಕ್ಕೆ ವರ್ತಮಾನ ಚರಿತ್ರೆ ಬೇಕಾಗಿದೆ. ವಿನಹ ಭೂತಕಾಲದ ಚರಿತ್ರೆ ಅಲ್ಲ. ಹಾಗಾಗಿ ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ಪ್ರತಿಯೊಬ್ಬರೂ ಓದಬೇಕು ಅವರ ಆದರ್ಶ ಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಹಿರೇಹಡಗಲಿಯ ಮಾನಿಹಳ್ಳಿ ಪುರವರ್ಗ ಮಠದ ಶ್ರೀ ಮಳೆಯೋಗೀಶ್ವರ ಸ್ವಾಮೀಜಿ ಮಾತನಾಡಿ, ಜಗತ್ತಿನಲ್ಲಿ ಒಳ್ಳೆಯವರು, ಕೆಟ್ಟವರು ಹುಟ್ಟಿ ಹೋಗಿದ್ದಾರೆ. ಸೂರ್ಯ, ಚಂದ್ರ ಇರುವವರೆಗೆ ನೆನಪಿನಲ್ಲಿ ಉಳಿಯುವಂತಹ ಶಾಶ್ವತವಾದ ಕೆಲಸ ಮಾಡಿ ಹೋಗಿದ್ದಾರೆ. ಮಹರ್ಷಿ ವಾಲ್ಮೀಕಿ ಅಂತವರು ಕೋಟಿಗೆ ಒಬ್ಬರು ಸಿಗುತ್ತಾರೆ. ಅವರ ಹೆಸರಿನಲ್ಲಿ ಜಾತಿ ಹೆಸರು ಹೇಳಿಕೊಂಡು ಬೆಳೆಯುವುದು ಸಾಧನೆಯಲ್ಲ. ಸಮಾಜಕ್ಕೆ ಉಪಕಾರ ಮಾಡುವವರೇ ನಿಜವಾದ ಸಾಧಕರು. ಹಣ, ಅಂತಸ್ತು ಮುಖ್ಯವಲ್ಲ. ಸಮಾಜವನ್ನು ಬೆಳೆಸುವ ಕಾರ್ಯ ಸಮಾಜದ ಮುಖಂಡರಿಂದ ಆಗಬೇಕು ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ ಮಾತನಾಡಿ, ಸರ್ವರಿಗೂ ಸಮಪಾಲು, ಸಮಬಾಳು ನೀಡಿದ ಕೀರ್ತಿ ಮಹರ್ಷಿ ವಾಲ್ಮೀಕಿಯವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಪ್ರಾಧ್ಯಾಪಕ ಡಾ. ಹರಾಳು ಬುಳ್ಳಪ್ಪ ಹಾಗೂ ಪ್ರಾಂಶುಪಾಲ ದುರುಗೇಶ ಮಾತನಾಡಿ, ವಾಲ್ಮೀಕಿ ಯವರನ್ನು ಜಾತಿಯಿಂದ ಗುರುತಿಸುವುದು ಸರಿಯಲ್ಲ. ಆಚರಣೆಗಳು ಅರ್ಥಪೂರ್ಣವಾಗಿರ ಬೇಕು. ಇಂತಹ ಕಾರ್ಯಕ್ರಮಗಳಲ್ಲಿ ಇತರೆ ಸಮಾಜಗಳ ಮುಖಂಡರನ್ನು ಕರೆಯಿಸಿ ಅರ್ಥ ಪೂರ್ಣ ಕಾರ್ಯಕ್ರಮ ಜರುಗಿಸಿದ್ದು ಉತ್ತಮ ಸಂದೇಶವಾಗಿದೆ ಎಂದರು.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಮಹಿಳಾ ಅಧ್ಯಕ್ಷರಾದ ಎಚ್.ಟಿ.ವನಜಾಕ್ಷಮ್ಮ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಕಾರ್ಯದರ್ಶಿ ಜಿಟ್ಟಿನಕಟ್ಟಿ ಎಚ್.ಕೆ. ಮಂಜುನಾಥ, ಪುರಸಭೆ ಸದಸ್ಯರಾದ ಲಾಟಿ ದಾದಾಪೀರ್, ಮುಖಂಡರಾದ ಪ್ರಕಾಶಗೌಡ, ಎಚ್.ಟಿ. ಶಿವಯೋಗಿ, ರಾಜಶೇಖರ್, ಬಿ.ಪಕ್ಕೀರಪ್ಪ, ಕೆ. ಅಶೋಕ, ಚಿಕ್ಕೇರಿ ಬಸಪ್ಪ, ಡಿ.ಪರಸಪ್ಪ, ಕೃಷ್ಣ ನಾಯ್ಕ, ವೀರನಾಯ್ಕ, ಶಶಿನಾಯ್ಕ, ಬಿ.ದುರು ಗಯ್ಯ, ಎಲ್.ಬಿ.ಹಾಲೇಶನಾಯ್ಕ, ಮಂಜುನಾಥ ಈಶಾಪುರ, ಚೂರಿ ಬಸವರಾಜ, ವಿ.ಬಿ.ಮಂಜುನಾಥ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



# ಭವಿಷ್ಯದ ಮಕ್ಕಳಿಗೆ ರಾಣಿ ಚೆನ್ನಮ್ಮನ ಇತಿಹಾಸದ ಅರಿವು ಮೂಡಿಸಲು ಕರೆ

**ಹರಿಹರದ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಕೆ.ಎಂ. ಗುರುಬಸವರಾಜ್**

ಹರಿಹರ, ಅ. 23 - ಚೆನ್ನಮ್ಮನನ್ನು ಒಂದು ಜಾತಿಗೆ ಸೀಮಿತ ಮಾಡುವುದು ಸರಿಯಲ್ಲ, ಅವರ ಆಡಳಿತಾವಧಿಯಲ್ಲಿ ಸಮಾಜದ ನಿರ್ಮಾಣಕ್ಕೆ ಶ್ರಮಿಸಿರುವ ಅನೇಕ ಉದಾಹರಣೆಗಳು ಇತಿಹಾಸದಲ್ಲಿ ಉಲ್ಲೇಖವಾಗಿವೆ ಎಂದು ತಹಶೀಲ್ದಾರ್ ಕೆ.ಎಂ. ಗುರುಬಸವರಾಜ್ ಹೇಳಿದರು.

ನಗರದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ತಾಲ್ಲೂಕು ಆಡಳಿತದಿಂದ ಬುಧವಾರ ಹಮ್ಮಿಕೊಂಡಿದ್ದ ಕಿತ್ತೂರು ರಾಣಿ ಚೆನ್ನಮ್ಮನ ಜಯಂತಿ ಹಾಗೂ 200ನೇ ವಿಜಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶದ ಭವಿಷ್ಯದ ದೃಷ್ಟಿಯಿಂದ ಮಕ್ಕಳಿಗೆ ಚೆನ್ನಮ್ಮನ ಇತಿಹಾಸ ತಿಳಿಸುವ ಅವಶ್ಯಕತೆಯಿದೆ. ಈ ಹಿನ್ನೆಲೆಯಲ್ಲಿ ಯುವ ಪೀಳಿಗೆಗೆ ರಾಣಿ ಚೆನ್ನಮ್ಮ ಜೀವನ ಚರಿತ್ರೆಯನ್ನು ತಿಳಿಸುವಂತಹ ಕಾರ್ಯಕ್ಕೆ ಮುಂದಾಗ ಬೇಕಿದೆ ಎಂದರು.

ಬಿಜೆಪಿ ಮುಖಂಡ ಎಸ್.ಎಂ. ವೀರೇಶ್ ಹನಗವಾಡಿ ಮಾತನಾಡಿ ಇತಿಹಾಸ ಮರೆತರೆ ಭವಿಷ್ಯದಲ್ಲಿ ಇತಿಹಾಸ ಸೃಷ್ಟಿಸಲು ಸಾದ್ಯವಿಲ್ಲ, ನಾಡಿನ ಅಭಿವೃದ್ದಿಗೆ ಶ್ರಮಿಸಿದ ವೀರ ಮಹಿಳೆಯ ಜೀವನ ಚರಿತ್ರೆ ಯುವ ಜನಾಂಗಕ್ಕೆ ದಾರಿ ದೀಪವಾಗಬೇಕೆಂದರು.

ಹೊಳೆಸಿರಿಗೆರೆಯ ಎನ್.ಜಿ. ನಾಗನಗೌಡ್ರು ಮಾತ ನಾಡಿ ವೀರಶೈವರೆಲ್ಲರೂ ಒಳ ಪಂಗಡಗಳನ್ನು ಮರೆತು ಸಾಮರಸ್ಯ ಬೆಳೆಸುವ ಮೂಲಕ ಸದೃಡ ಸಮಾಜದ ನಿರ್ಮಾಣ ಮಾಡಬೇಕಿದೆ ಎಂದು ಅಭಿಪ್ರಾಯ ಪಟ್ಟರು.

ತಾ.ಪಂ. ಮಾಜಿ ಸದಸ್ಯ ಮಹಾಂತೇಶ್ ಮಾತನಾಡಿ ವೀರ ರಾಣಿ ಕಿತ್ತೂರು ಚೆನ್ನಮ್ಮ ಸ್ಮರಣೆ ಕೇವಲ ಜಯಂತಿಗಳಿಗೆ ಸೀಮಿತವಾಗದೆ ಹರಿಹರ ಪ್ರಮೂಖ ರಸ್ತೆಯಲ್ಲಿ ಆವರ ಪುತ್ಥಳಿಯನ್ನು ಸ್ಥಾಪಿಸಿ ಪ್ರತಿನಿತ್ಯ ಆವರ ಸ್ಮರಣೆ ಮಾಡುವ ರೀತಿ ತಾಲೂಕು ಆಡಳಿತ ವ್ಯವಸ್ಥೆ ಮಾಡಲು ಮುಂದಾಗಬೇಕು ಎಂದರು.

ಈ ವೇಳೆ ಸರ್ವೋಧಯ ಮಠದ ಶಿವಕುಮಾರ್ ಶ್ರೀ, ನಗರ ಸಭಾ ಸದಸ್ಯೆ ಆಶ್ವಿನಿ ಕೃಷ್ಣ, ಆಖಿಲ ಭಾರತ ವೀರಶೈವ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಡಿ.ಜಿ. ಶಿವಾನಂದಪ್ಪ, ಕಾರ್ಯದರ್ಶಿ ವೀರೇಶ್ ಯಾದವಾಡ್, ಮುಖಂಡರಾದ ಗುಡದದಳ್ಳಿ ಶೇಖರಪ್ಪ, ಬೆಣ್ಣೆ ಸಿದ್ದಣ್ಣ, ಜಿ.ಕೆ. ಮಲ್ಲಿಕಾರ್ಜುನ, ತಿಮ್ಮನ ಗೌಡ್ರು, ನಿರಂಜನ ದೀಟೂರ್, ಗಜೇಂದ್ರ, ಮಾಲತೇಶ್, ಕೆ. ಕರಿಬಸಪ್ಪ, ಪ್ರವೀಣ್ ಕುಮಾರ್, ಸಾಲಕಟ್ಟೆ ಮಂಜಣ್ಣ, ನಾಗರಾಜ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಭ್ರಷ್ಟಾಚಾರ : ಎಫ್.ಸಿ.ಐ. ಅಧಿಕಾರಿಗೆ 4 ಕೋಟಿ ರೂ. ದಂಡ, 5 ವರ್ಷ ಜೈಲು

ನವದೆಹಲಿ, ಅ. 23 - ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತೀಯ ಆಹಾರ ನಿಗಮ (ಎಫ್.ಸಿ.ಐ.) ದ ಅಧಿಕಾರಿಯೊಬ್ಬರಿಗೆ ಭೂಪಾಲದ ಸಿಬಿಐ ವಿಶೇಷ ನ್ಯಾಯಾಲಯ 4.05 ಕೋಟಿ ರೂ.ಗಳ ದಂಡ ಹಾಗೂ ಐದು ವರ್ಷಗಳ ಕಠಿಣ ಶಿಕ್ಷೆ ವಿಧಿಸಿದೆ.

ಭೂಪಾಲದ ಎಫ್.ಸಿ.ಐ. ವಿಭಾಗೀಯ ಕಚೇರಿಯಲ್ಲಿ ಸಹಾಯಕರಾಗಿದ್ದ ಕಿಶೋರ್ ಮೀನಾ ವಿರುದ್ಧ ಜೂನ್ 3, 2021ರಲ್ಲಿ ಭ್ರಷ್ಟಾಚಾರ ಪ್ರಕರಣ ದಾಖಲಿಸಲಾಗಿತ್ತು.

ಅಧಿಕಾರಿ ಮನೆ ಮೇಲೆ ದಾಳಿ ನಡೆಸಿದಾಗ ಸಿಬಿಐಗೆ 3.01 ಕೋಟಿ ರೂ. ನಗದು, ಬಂಗಾರದ ಆಭರಣಗಳು ದೊರೆತಿದ್ದವು. 2016ರಲ್ಲಿ ಮೀನಾ ಕುಟುಂಬದ ಆಸ್ತಿ 3.52 ಲಕ್ಷ ರೂ. ಆಗಿತ್ತು. 2021ರ ವೇಳೆಗೆ ಈ ಆಸ್ತಿ 4.32 ಕೋಟಿ ರೂ.ಗಳಿಗೆ ತಲುಪಿತ್ತು. ಈ ಅವಧಿಯಲ್ಲಿ ಕುಟುಂಬದ ಒಟ್ಟು ಆದಾಯ 45 ಲಕ್ಷ ರೂ. ಮಾತ್ರ ಆಗಿತ್ತು ಎಂದು ಸಿ.ಬಿ.ಐ. ತಿಳಿಸಿತ್ತು.

# ಶ್ರೀ ರಾಮಕೃಷ್ಣ ಶಾಲೆಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ



ದಾವಣಗೆರೆ, ಅ.23- ಡಿಸಿಎಂ ಟೌನ್‌ಶಿಪ್‌ನಲ್ಲಿರುವ ಶ್ರೀ ರಾಮ ಕೃಷ್ಣ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಜಯಂತಿ ಆಚರಿಸಲಾಯಿತು. ಸಹ ಶಿಕ್ಷಕಿ ಶ್ರೀಮತಿ ಅನಿತಾ ಮಾತನಾಡಿದರು. ವಿದ್ಯಾರ್ಥಿಗಳಾದ ಪರೀಜ್ಞಾ ಜಿ ಮತ್ತು ಬಿ.ಎಂ ತೇಜಸ್ವಿನಿ ಕಿರು ಭಾಷಣ ಮಾಡಿದರು. ಮುಖ್ಯೋಪಾಧ್ಯಾಯ ಡಿ.ಸಿ ಸುರೇಶ್, ಸಹ ಶಿಕ್ಷಕಿಯರಾದ ಶೋಭಾ ಹುಲ್ಲುಮನಿ, ಕಾವ್ಯ, ಆಶಾ, ಮಹಾಲಕ್ಷ್ಮಿ, ಅನಿತಾ, ಕರಿಬಸಮ್ಮ ಶ್ರೀದೇವಿ ಮತ್ತು ಶ್ರೀದೇವಿ, ಕಚೇರಿ ಸಿಬ್ಬಂದಿ ಅನುಸೂಯಮ್ಮ, ರಾಜೇಶ್ವರಿ, ಲಕ್ಷ್ಮವ್ವ ಮತ್ತಿತರರು ಹಾಜರಿದ್ದರು.

# ಜನರಲ್ ಕೆ.ಎಸ್ ತಿಮ್ಮಯ್ಯ ನಗದು ಪ್ರಶಸ್ತಿಗಾಗಿ ಅರ್ಜಿ

ದಾವಣಗೆರೆ, ಜು. 23 - ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ ಮತ್ತು 2ನೇ ಪಿ.ಯು.ಸಿ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಗರಿಷ್ಠ ಅಂಕ ಪಡೆದ ಕರ್ನಾಟಕದ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ 'ಜನರಲ್ ಕೆ.ಎಸ್. ತಿಮ್ಮಯ್ಯ' ನಗದು ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಅಕ್ಟೋಬರ್ 30 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08182-220925 ಸಂಪರ್ಕಿಸಬಹು ದೆಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸಿದ್ದವೀರಪ್ಪ ಬಡಾವಣೆ, 6ನೇ ಕ್ರಾಸ್‌ನಿಂದ 12 ನೇ ಕ್ರಾಸ್‌ನವರಿಗೆ, ಶಾಮನೂರು ರಸ್ತೆ, ಹೋಟೆಲ್ ಸಂಕಮ ಮತ್ತು ದುರ್ಗಾ ಹಾಸ್ಪತ್ರೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಕೊಕ್ಕನೂರು ಗ್ರಾ.ಪಂ. ಅಧ್ಯಕ್ಷರಾಗಿ ಹಳ್ಳಿಹಾಳ್ ಗೌರಮ್ಮ ಧರ್ಮರಾಜ್



ಮಲೇಬೆನ್ನೂರು, ಅ.23- ಕೊಕ್ಕನೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಹಳ್ಳಿಹಾಳ್ ಗ್ರಾಮದ ಶ್ರೀಮತಿ ಗೌರಮ್ಮ ಟಿ.ಎಂ. ಧರ್ಮರಾಜ್ ಅವರು ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಕೊಕ್ಕನೂರಿನ ಶ್ರೀಮತಿ ಹುಲಿಗೆಮ್ಮ ಗೋವಿಂದಪ್ಪ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಹರಿಹರ ತಾ.ಪಂ. ಇಓ ಸುಮಲತಾ ಅವರು ಚುನಾವಣಾಧಿಕಾರಿಯಾಗಿದ್ದರು.

ಗ್ರಾ.ಪಂ. ಉಪಾಧ್ಯಕ್ಷ ಉಕ್ಕಡಗಾತ್ರಿ ಮಂಜುನಾಥ್, ಗ್ರಾಮದ ಮುಖಂಡರಾದ ಓ.ಬಸವನಗೌಡ, ಅಂಗಡಿ ಧರ್ಮಣ್ಣ, ಕೆ.ಪಿ. ಆಂಜನೇಯ ಪಾಟೀಲ್, ಅಭಿನಂದನ್ ಪಾಟೀಲ್, ಓ. ನಿಂಗನಗೌಡ, ಹಳ್ಳಿಹಾಳ್ ಗ್ರಾಮದ ಮುಖಂಡರಾದ ಹೆಚ್.ಟಿ. ಪರಮೇಶ್ವರಪ್ಪ, ಯು.ಎನ್. ಶಿವನಗೌಡ, ಹಾಲಿವಾಣದ ಈರನಗೌಡ, ಮಾಳಗಿ ತಿಮ್ಮನಗೌಡ ಡಿ. ಕೃಷ್ಣಮೂರ್ತಿ, ಹೆಚ್.ಎಸ್. ಉಮೇಶ್ ಹೆಚ್.ನಿಂಗರಾಜ್, ತಳವಾರ್ ಭೀಮಪ್ಪ ಮತ್ತು ನಿಟುವಳ್ಳಿಯ ಮಾಳಗಿ ಕರಿಯಪ್ಪ ಸೇರಿದಂತೆ ಗ್ರಾ.ಪಂ. ಸದಸ್ಯರು ಈ ವೇಳೆ ಹಾಜರಿದ್ದರು.

# ಶಿಸ್ತು ಬದ್ದವಾಗಿ ರಾಜ್ಯೋತ್ಸವ ಆಚರಿಸಲು ಸಲಹೆ



**ಹರಿಹರದಲ್ಲಿನ ಪೂರ್ವಭಾವಿ ಸಭೆಯಲ್ಲಿ ಶಾಸಕ ಬಿ.ಪಿ. ಹರೀಶ್**

ಹರಿಹರ, ಅ.23- ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವವನ್ನು ಎಲ್ಲಾ ಇಲಾಖೆ ಅಧಿ ಕಾರಿಗಳು, ಜವಾಬ್ದಾರಿಯಿಂದ, ಶಿಸ್ತು ಬದ್ದವಾಗಿ ಮತ್ತು ಸಡಗರ, ಸಂಭ್ರಮದಿಂದ ಆಚರಣೆ ಮಾಡುವಂತೆ ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ನಿನ್ನೆ ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೆರವಣಿಗೆ ಮಾರ್ಗದಲ್ಲಿ ಕನ್ನಡ ಧ್ವಜಗಳನ್ನು ಕಟ್ಟುವ ಮೂಲಕ ನಗರವನ್ನು ಶೃಂಗರಿಸಬೇಕು. ಶಿಕ್ಷಣ, ತೋಟಗಾರಿಕೆ, ಕೃಷಿ ಸೇರಿದಂತೆ ವಿವಿಧ ಇಲಾಖೆಯ ವತಿಯಿಂದ ರೈತರಿಗೆ, ಮಕ್ಕಳಿಗೆ ಮತ್ತು ಸಾರ್ವಜನಿಕರಿಗಾಗಿ ನಾಡಿನ ಇತಿಹಾಸ ಮತ್ತು ಪರಂಪರೆಯ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ವಿವಿಧ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಸಾಧಕರನ್ನು ಗುರುತಿಸಿ ಸನ್ಮಾನಿಸ ಬೇಕು. ತಾಲ್ಲೂಕಿನ ಎಲ್ಲಾ ಇಲಾಖೆಯ ಅಧಿಕಾರಿ ಗಳ ಜೊತೆಗೆ ಸಿಬ್ಬಂದಿಗಳು ಮತ್ತು ಶಾಲಾ ಶಿಕ್ಷಕರು ಕಡ್ಡಾಯವಾಗಿ ಪಾಲ್ಗೊಂಡು ಸಮಾರಂಭವನ್ನು ಯಶಸ್ವಿಗೊಳಿಸಲು ಕರೆ ನೀಡಿದರು.

ತಹಶೀಲ್ದಾರ್ ಗುರುಬಸವರಾಜ್ ಮಾತ ನಾಡಿ, ರಾಜ್ಯೋತ್ಸವ ಸಮಾರಂಭಕ್ಕೂ ಮುನ್ನ ಹರಿಹರೇಶ್ವರ ದೇವಾಲಯದ ಮುಂಭಾಗದಿಂದ ಭುವನೇಶ್ವರಿ ಭಾವಚಿತ್ರದ ಮೆರವಣಿಗೆ ವಿವಿಧ ಕಲಾ ಮೇಳಗಳೊಂದಿಗೆ ನಡೆಯಲಿದೆ. ನಂತರ ಗಾಂಧಿ ಮೈದಾನದಲ್ಲಿ ವೇದಿಕೆ ಸಮಾರಂಭ ನಡೆಯಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಿಕ್ಷಣಾಧಿಕಾರಿ ಡಿ. ದುರ್ಗಪ್ಪ, ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ, ತೋಟಗಾರಿಕೆ ಇಲಾಖೆ ಶಶಿಧರಯ್ಯ, ಆರೋಗ್ಯ ಇಲಾಖೆ ಅಬ್ದುಲ್ ಖಾದರ್, ತಾಪಂ ಇಲಾಖೆ ಕರಿಬಸಪ್ಪ, ಕಾರ್ಮಿಕ ಇಲಾಖೆ ಜೆ. ಕವಿತಾ ಕುಮಾರಿ, ಬಿ.ಸಿ.ಎಂ. ಇಲಾಖೆ ಆಸ್ಮಾಬಾನು, ಮೀನುಗಾರಿಕೆ ಇಲಾಖೆ ಶಶಿಕುಮಾರ್, ಸಿಡಿಪಿಓ ಇಲಾಖೆ ರಶೀದಬಾನು, ಪಶು ಇಲಾಖೆ ಟಿ.ಕೆ ಸಿದ್ದೇಶ್, ಶಿಕ್ಷಣ ಇಲಾಖೆ ಆರ್, ಕೃಷ್ಣಪ್ಪ ಇತರರಿದ್ದರು.

# ಜಿಗಳಿಯಲ್ಲಿ ರಾಣಿ ಚೆನ್ನಮ್ಮ ಜಯಂತಿ

ಮಲೇಬೆನ್ನೂರು, ಅ.23- ಜಿಗಳಿ ಗ್ರಾ.ಪಂ. ಕಚೇರಿ ಮತ್ತು ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮನ ಜಯಂತಿ ಹಾಗೂ 200ನೇ ವಿಜಯೋತ್ಸವವನ್ನು ಆಚರಿಸಲಾಯಿತು.

ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿಕ್ಷಕ ಗುಡ್ಡಪ್ಪ ಅವರು, ಚೆನ್ನಮ್ಮ ಅವರ ಬಗ್ಗೆ ತಿಳಿಸಿಕೊಟ್ಟರು. ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ ಅವರು, ಕಿತ್ತೂರು ರಾಣಿ ಚೆನ್ನಮ್ಮನ ದೇಶ ಪ್ರೇಮ ಎಲ್ಲರಿಗೂ ಸ್ಫೂರ್ತಿಯಾಗಿದ್ದು, ಅವರ ಹೋರಾಟವನ್ನು ಇಂದಿನ ಯುವ ಜನಾಂಗಕ್ಕೆ ತಿಳಿಸಬೇಕೆಂದರು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್, ಉಪಾಧ್ಯಕ್ಷ ಡಿ.ಎಂ.ಹರೀಶ್, ಸದಸ್ಯರಾದ ಕೆ.ಜಿ.ಬಸವರಾಜ್, ಎನ್.ಎಂ.ಪಾಟೀಲ್, ಶ್ರೀಮತಿ ಆಶಾ ಅಣ್ಣಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ದೇವೇಂದ್ರಪ್ಪ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷರಾದ ಜಿ.ಪಿ.ಹನುಮಗೌಡ, ಎಂ.ಆರ್.ನಾಗರಾಜ್, ಸುನೀತಾ ನಾಗರಾಜ್, ಉಪಾಧ್ಯಕ್ಷೆ ಮಂಜುಳಾ ಮಾಲತೇಶ್, ಪಂಚಮಸಾಲಿ ಸಮಾಜದ ಮುದ್ದಪ್ಪ ಬಸವನಗೌಡ, ಮುದ್ದಪ್ಪ ಶಂಕ್ರಪ್ಪ, ಮುದ್ದಪ್ಪ ಶಿವಣ್ಣ, ಬನ್ನಿಕೋಡು ಪ್ರಕಾಶ್, ಗುರುರಾಜ್, ಪಿಡಿಓ ಉಮೇಶ್, ಕಾರ್ಯದರ್ಶಿ ಸುಜಾತ, ಬಿ. ಮೌನೇಶ್, ಬಸವರಾಜಯ್ಯ, ಮುತ್ತು ಶಾಲಾ ಶಿಕ್ಷಕರಾದ ಮಲ್ಲಿಕಾರ್ಜುನ್, ಲೋಕೇಶ್, ಶ್ರೀನಿವಾಸ್ ರೆಡ್ಡಿ, ಜಯಶ್ರೀ, ಕರಿಬಸಮ್ಮ ಭಾಗವಹಿಸಿದ್ದರು.




**ನರಗನಹಳ್ಳಿ ಮೀನಾಕ್ಷಮ್ಮ ನಿಧನ**



ದಾವಣಗೆರೆ ತಾಲ್ಲೂಕು ನರಗನಹಳ್ಳಿ ಗ್ರಾಮದ ಎ.ಕೆ. ಕಾಲೋನಿ ವಾಸಿ

**ಶ್ರೀಮತಿ ಮೀನಾಕ್ಷಮ್ಮ (45)**

ಇವರು ದಿನಾಂಕ 23.10.2024ರ ಬುಧವಾರ ಮಧ್ಯಾಹ್ನ 2ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24.10.2024ರ ಗುರುವಾರ ಮಧ್ಯಾಹ್ನ ನರಗನಹಳ್ಳಿ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. : 88617 85509**



**ಭಾವಪೂರ್ಣ ಶ್ರದ್ಧಾಂಜಲಿ**



**ಶ್ರೀ ಶ್ರೀ ಕೃಷ್ಣ**

**(ಉಪಾಧ್ಯಕ್ಷರು ಟಿ,ಎ,ಪಿ,ಸಿ,ಎಂ,ಎಸ್,ಲಿ. ಆರ್.ಎಂ.ಸಿ. ರಸ್ತೆ, ದಾವಣಗೆರೆ)**

ಅವರು ದಿನಾಂಕ 23.10.2024ರ ಬುಧವಾರ ನಿಧನರಾಗಿದ್ದು. ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ, ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುತ್ತೇವೆ.

**ದಾವಣಗೆರೆ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘ ನಿ, ಆರ್.ಎಂ.ಸಿ. ರಸ್ತೆ, ದಾವಣಗೆರೆ ಇದರ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗ**


# ಕಾಣೆಯಾಗಿದ್ದ ವ್ಯಕ್ತಿ ಅಸ್ಥಿ ಪಂಜರ ರೂಪದಲ್ಲಿ ಪತ್ತೆ : ಕೊಲೆ ಆರೋಪ

ದಾವಣಗೆರೆ, ಅ.23- ಒಂದು ತಿಂಗಳ ಹಿಂದೆ ಕಾಣೆಯಾಗಿದ್ದ ವ್ಯಕ್ತಿಯೊಬ್ಬನ ಮೃತದೇಹ ರಸ್ತೆ ಬದಿಯ ಪೊದೆಯಲ್ಲಿ ಬೈಕ್ ಸಮೇತ ಅಸ್ಥಿಪಂಜರದ ರೂಪದಲ್ಲಿ ಪತ್ತೆಯಾಗಿರುವ ಘಟನೆ ತಾಲ್ಲೂಕಿನ ಅಣಜಿ ಗ್ರಾಮದ ಬಳಿ ಬೆಳಕಿಗೆ ಬಂದಿದೆ. ಪತ್ತೆಯಾದ ಅಸ್ಥಿಪಂಜರ ಕಡ್ಲೇಬಾಳು ಗ್ರಾಮದ ತಿಪ್ಪೇಶ್ (45) ಅವರದು ಎಂದು ಗುರುತಿಸಲಾಗಿದೆ.

ಅಪಘಾತವಾಗಿ ರಸ್ತೆ ಬದಿ ಬಿದ್ದು ಸಾವನ್ನಪ್ಪಿರುವ ಶಂಕೆಯನ್ನು ದಾವಣಗೆರೆ ಗ್ರಾಮಾಂತರ ಠಾಣೆಯ ಪೊಲೀಸರು ವ್ಯಕ್ತಪಡಿಸಿದ್ದಾರೆ. ಆದರೆ ತನ್ನ ಪತಿಯನ್ನು ಕೊಲೆ ಮಾಡಲಾಗಿದೆ ಎಂದು ತಿಪ್ಪೇಶ್ ಪತ್ನಿ, ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಮೃತ ವ್ಯಕ್ತಿ ಒಂದು ತಿಂಗಳ ಹಿಂದೆ ವಿವಾಹಿತ ಮಹಿಳೆಯೊಂದಿಗೆ ಕಾಣೆಯಾಗಿದ್ದ. ಊರಿಗೆ ಹೋಗಿ ಬರುವುದಾಗಿ ಹೇಳಿ ಹೋದವನು ಮನೆಗೆ ಬರಲೇ ಇಲ್ಲ. ಪತಿಯ ಸಾವಿಗೆ ವಿವಾಹಿತ ಮಹಿಳೆ ಮತ್ತು ಆಕೆ ಕುಟುಂಬವೇ ಕಾರಣ. ಗಂಡ ಕಾಣೆಯಾದ ದಿನದಿಂದ ವಿವಾಹಿತ ಮಳೆಯ ಕುಟುಂಬಸ್ಥರು ಕಾಣಿಸುತ್ತಿಲ್ಲ ಎಂದು ಮೃತನ ಪತ್ನಿ ಹೇಳಿದ್ದಾರೆ.

ರಸ್ತೆಬದಿಯಲ್ಲಿ ಸಿಕ್ಕ ತಿಪ್ಪೇಶ್ ಅಸ್ಥಿಪಂಜರದ ಮರಣೋತ್ತರ ಪರೀಕ್ಷೆಯು ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ನಡೆದ ನಂತರ, ಅಸ್ಥಿ ಪಂಜರ ಇರುವ ಪುಟ್ಟ ಗಂಟನ್ನು ಕೈಯಲ್ಲಿ ಹಿಡಿದ ಸಂಬಂಧಿಕರು ಮನೆಗೆ ತೆರಳಿದರು. ಈ ವೇಳೆ ಪತ್ನಿ ಗಂಗಮ್ಮ ಹಾಗು ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.


**ಕಕ್ಕರಗೊಳ್ಳದ ದ್ಯಾಮಪ್ಪ ನಿಧನ**



ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ವಾಸಿ ದಿ. ಹರಿಹರದ ಸುಲ್ತಾನಪ್ಪನವರ ಪುತ್ರ ಶ್ರೀ ದ್ಯಾಮಪ್ಪ (53) ಇವರು ದಿನಾಂಕ 23.10.2024ರ ಬುಧವಾರ ಬೆಳಿಗ್ಗೆ 8ಕ್ಕೆ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಸಹೋದರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24.10.2024ರ ಗುರುವಾರ ಬೆಳಿಗ್ಗೆ 10.30ಕ್ಕೆ ಕಕ್ಕರಗೊಳ್ಳದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.


# ಗ್ರಾಮೀಣ ಭಾಗದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದಾವಣಗೆರೆ ತಾಲ್ಲೂಕಿನ ಕುಕ್ಕುವಾಡ, ಕೋಲ್ಕುಂಟೆ, ಗಿರಿಯಾಪುರ, ಕೈದಾಳೆ, ಹದಡಿ, ಕಲಬಂಡೆ, ಲೋಕಿಕೆರೆ, ಬಲ್ಲೂರು, ಕನಗೊಂಡನಹಳ್ಳಿ, ಮತ್ತಿ, ನಾಗರಸನಹಳ್ಳಿ, ಹೂವಿನಮಡು ಹಾಗೂ ಸುತ್ತಮುತ್ತಲಿನ ಗ್ರಾಮಗಳು ಮತ್ತು ಶ್ಯಾಗಲೆ, ಕಂದಗಲ್ಲು ಕೋಡಿಹಳ್ಳಿ, ಗೋಣಿವಾಡ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಕೂಡಲೇ ಒಳ ಮೀಸಲಾತಿ ಜಾರಿಗಾಗಿ ಆಗ್ರಹ

**(1ನೇ ಪುಟದಿಂದ)** ಮುಂದಾಗಬೇಕು. ಇಲ್ಲವಾದಲ್ಲಿ ಮುಂದಿನ ಚುನಾವಣೆಗಳಲ್ಲಿ ತಕ್ಕ ಪಾಠವನ್ನು ದಲಿತ ಸಮುದಾಯ ಕಲಿಸಲಿದೆ ಎಂದು ಎಚ್ಚರಿಸಿದರು.

ನಿವೃತ್ತ ಎಸ್ಪಿ ಎನ್. ರುದ್ರಮುನಿ ಮಾತನಾಡಿ, ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಹೊರತಾಗಿ ಒಳ ಮೀಸಲಾತಿ ನೀಡದೇ ಇರುವುದರಿಂದ ಅನೇಕ ಸಮುದಾಯಗಳಿಗೆ ಅನ್ಯಾಯವಾಗುತ್ತಿದೆ. ಸುಪ್ರೀಂ ಕೋರ್ಟ್ ತೀರ್ಪಿನಂತೆ ಒಳ ಮೀಸಲಾತಿ ಜಾರಿ ಮಾಡಲೇಬೇಕು ಎಂದು ಆಗ್ರಹಿಸಿದರು.

ಒಳ ಮೀಸಲಾತಿ ಜಾರಿಗೆ ಬರುವವರೆಗೂ ರಾಜ್ಯದಲ್ಲಿ ನಡೆಯುವ ಎಲ್ಲಾ ಸರ್ಕಾರಿ ಮತ್ತು ಅರೆ ಸರ್ಕಾರಿ ನೇಮಕಾತಿ ಸ್ಥಗಿತಗೊಳಿಸಬೇಕು. ಹಣಕಾಸಿನ ಮತ್ತು ಇತರೆ ಸೌಲಭ್ಯಗಳನ್ನು ನಿಲ್ಲಿಸಬೇಕೆಂದು ಮನವಿ ಮಾಡಿದರು.

ಈ ಹೋರಾಟಕ್ಕೆ ಸರ್ಕಾರ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ಒಳಗೊಂಡಂತೆ ವಿವಿಧ ಸ್ವರೂಪದ ಹೋರಾಟಗಳನ್ನು ಮಾಡುವುದಾಗಿ ಎಚ್ಚರಿಸಿದರು.

ಮಹಾನಗರ ಪಾಲಿಕೆ ಮಾಜಿ ಸದಸ್ಯ ಎಂ. ಹಾಲೇಶ್ ಮಾತನಾಡಿ, ಶಾಂತಿಯುತ ಹೋರಾಟ ನಡೆಸಿದರೆ ಸಾಲದು, ಇಡೀ ರಾಜ್ಯಾದ್ಯಂತ ಉಗ್ರವಾದ ಹೋರಾಟ ನಡೆಸಬೇಕಾಗಿದೆ. ರೈಲು, ಬಸ್ ತಡೆ ಚಳವಳಿ ಸೇರಿದಂತೆ ವಿವಿಧ ಹಂತದ ಹೋರಾಟಗಳನ್ನು ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದರು.

ನಿವೃತ್ತ ಪೊಲೀಸ್ ಎಸ್ಪಿ ರವಿನಾರಾಯಣ್, ನಗರ ಪಾಲಿಕೆ ಸದಸ್ಯ ಬಿ.ಹೆಚ್.ಉದಯಕುಮಾರ್, ಒಕ್ಕೂಟದ ಮುಖಂಡರಾದ ಶ್ರೀಧರ್ ಕಲಿವೀರ, ಬಿ.ಎಂ. ಹನುಮಂತಪ್ಪ, ಎಸ್. ಮಲ್ಲಿಕಾರ್ಜುನ್, ಕೆ.ಎಸ್. ಗೋವಿಂದರಾಜ್, ಬಿ.ಹೆಚ್.ವೀರಭದ್ರಪ್ಪ, ಎನ್.ನೀಲಗಿರಿಯಪ್ಪ, ಸೋಮಲಾಪುರದ ಹನುಮಂತಪ್ಪ, ಹೆಚ್.ಮಲ್ಲೇಶ್, ಮಲ್ಲಿಕಾರ್ಜುನ್ ಹಲಸಂಗಿ, ಆಲೂರು ನಿಂಗರಾಜ್, ಬಿ.ಎಸ್.ಪುರುಷೋತ್ತಮ್, ಸಿ.ಎಂ.ಬಸವರಾಜ್, ಎಲ್.ಹೆಚ್. ಸಾಗರ್, ಹೆಗ್ಗೆರೆ ರಂಗಪ್ಪ, ಎಸ್.ಶೇಖರಪ್ಪ, ಕುಂದುವಾಡ ಮಂಜುನಾಥ್, ಶಂಕರಪ್ಪ, ನಿಜಗುಣ, ಹೆಚ್.ಸಿ. ಗುಡ್ಡಪ್ಪ, ಕೆ.ಏಕಾಂತಪ್ಪ, ನಾಗಭೂಷಣ್, ಶಂಭುಲಿಂಗಪ್ಪ, ಓಂಕಾರಪ್ಪ, ಮಂಜುನಾಥ್ ಕಣಿವೆಹಳ್ಳಿ, ಆರ್. ನಾಗಪ್ಪ, ಶಿವಣ್ಣ, ಹೆಚ್.ಕೆ.ಬಸವರಾಜ್, ಬಿ.ಎಂ. ನಿರಂಜನ್, ದುಗ್ಗಪ್ಪ, ಹೆಚ್.ಸಿ. ಗುಡ್ಡಪ್ಪ ಸೇರಿದಂತೆ ಅನೇಕರಿದ್ದರು.



## ರಾಜಕೀಯ ಪಕ್ಷಗಳಿಂದ ದಿಕ್ಕು ತಪ್ಪಿಸುವ ಕೆಲಸ: ಮಾಜಿ ಸಚಿವ ನಾರಾಯಣಸ್ವಾಮಿ

ದಾವಣಗೆರೆ, ಅ. 23- ಛಲವಾದಿ ಮತ್ತು ಮಾದಿಗ ಸಮುದಾಯಗಳಲ್ಲಿ ಜಾಗೃತಿ ಮೂಡಬೇಕಿದ್ದು, ಕೆಲವು ರಾಜ್ಯ ಗಳಲ್ಲಿ ಅಸ್ಪೃಶ್ಯ ಸಮುದಾಯ ಮೀಸಲಾತಿ ಯಿಂದ ವಂಚಿತವಾಗಿದೆ. ಛಲವಾದಿ ಮತ್ತು ಮಾದಿಗ ಸಮುದಾಯದ ದಿಕ್ಕು ತಪ್ಪಿಸುವ ಕೆಲಸವನ್ನು ರಾಜಕೀಯ ಪಕ್ಷಗಳು ಮಾಡುತ್ತಿವೆ ಎಂದು ಮಾಜಿ ಸಚಿವ ಎ. ನಾರಾಯಣಸ್ವಾಮಿ ದೂರಿದರು.

ನಗರದಲ್ಲಿ ಛಲವಾದಿ-ಮಾದಿಗ ಸಮುದಾಯಗಳ ಒಕ್ಕೂಟದ ವತಿಯಿಂದ ಒಳ ಮೀಸಲಾತಿಗೆ ಆಗ್ರಹಿಸಿ ಹಮ್ಮಿಕೊಂಡಿರುವ ಪ್ರತಿಭಟನೆ ಸಂದರ್ಭದಲ್ಲಿ ಅವರು ಮಾತನಾಡಿದರು.

ಸರ್ಕಾರ ನೇಮಿಸಿರುವ ಹಲವು ಆಯೋಗಗಳು ಒಳ ಮೀಸಲಾತಿ ಅವಶ್ಯಕತೆಯನ್ನು ಪ್ರತಿಪಾದಿಸಿವೆ. ಈ ದೇಶದ ಶೋಷಿತ ಸಮುದಾಯಕ್ಕೆ ಒಳ ಮೀಸಲಾತಿಯ ಅಗತ್ಯವಿದೆ. ಇದಕ್ಕೆ ಸಂವಿಧಾನದ ಯಾವುದೇ ಪರಿಚ್ಛೇದವೂ ಅಡ್ಡಿಪಡಿಸಿಲ್ಲ. ಈ ವಿಚಾರದಲ್ಲಿ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ನೀಡಿದ್ದ ತೀರ್ಪು ಒಪ್ಪಲು ಸಾಧ್ಯವಿರಲಿಲ್ಲ ಎಂದರು.

ಪಂಚವಾರ್ಷಿಕ ಯೋಜನೆಗಳು ಶೋಷಿತ ಸಮುದಾಯಗಳನ್ನು ತಲುಪಲಿಲ್ಲ. ಛಲವಾದಿ-ಮಾದಿಗ ಸಮುದಾಯ ಒಟ್ಟಾಗಿ ತಮ್ಮ ಹಕ್ಕನ್ನು ಕೇಳಲು ಮುಂದಾಗಿವೆ. ಒಳ ಮೀಸಲಾತಿ ಪಡೆಯಲು ಹೋರಾಟ ಮಾಡಬೇಕಾಗಿದೆ ಎಂದು ಹೇಳಿದರು.

# ತಂತ್ರಜ್ಞಾನದ ಭರಾಟೆಯಲ್ಲಿ ಮೌಲ್ಯ ಕುಗ್ಗದಿರಲಿ

## 'ಖಗೋಳ ವಿಸ್ಮಯ' ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿದ ಡಾ.ಎಂ.ಆರ್. ಜಗದೀಶ್



ದಾವಣಗೆರೆ, ಅ.23- ವಿಜ್ಞಾನ ಮತ್ತು ತಂತ್ರಜ್ಞಾನದ ಭರಾಟೆಯಲ್ಲಿ ನಮ್ಮ ಮೌಲ್ಯಗಳು ಕಳೆದು ಹೋಗಬಾರದು ಎಂದು ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಂ.ಆರ್.ಜಗದೀಶ್ ತಿಳಿಸಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಜಿಲ್ಲಾ ಬಾಲಭವನ ಸಮಿತಿ ಸಹಯೋಗದಲ್ಲಿ ಧರಾಮ ವಿಜ್ಞಾನ ಕಾಲೇಜಿನಲ್ಲಿ ಈಚೆಗೆ ಆಯೋಜಿಸಿದ್ದ 'ಖಗೋಳ ವಿಸ್ಮಯ' ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜನರಿಗೆ ನಂಬಿಕೆ ಇರಬೇಕೇ ಹೊರತು ಮೂಢನಂಬಿಕೆಗಳಲ್ಲ. ಜಗತ್ತಿನ ಕೌತುಕಗಳನ್ನು ನೋಡುವ, ಆನಂದಿಸುವ ಮತ್ತು ಕಣ್ತುಂಬಿಕೊಳ್ಳುವ ಅವಕಾಶಗಳಿಗೆ ಮೌಢ್ಯ ಬಿತ್ತುವ ಜನರು ಬಹುಕಾಲದಿಂದ ಇಂತಹ ವಿಸ್ಮಯಗಳನ್ನು ಜನರು ನೋಡದಂತೆ ದೂರವಿಟ್ಟಿದ್ದಾರೆ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪರಿವೀಕ್ಷಕಿ ಮಾಲತಿ ಹಿರೇಗೌಡರ ಮಾತನಾಡಿ, ಜ್ಞಾನ ಹೆಚ್ಚಾದಂತೆ ಮೌಢ್ಯ ಕಡಿಮೆಯಾಗುತ್ತದೆ ಎಂದು ಭಾವಿಸಿದ್ದೆವು. ಆದರೆ ಇಂದು ವಿದ್ಯಾವಂತರೇ ಮೌಢ್ಯಕ್ಕೆ ಬಲಿಯಾಗಿ ಮೌಢ್ಯ ಬಿತ್ತುವಿಕೆಯಲ್ಲಿ ತೊಡಗಿದ್ದಾರೆ ಎಂದು ದೂರಿದರು.

ಕ.ರಾ.ವಿ.ಪ. ಗೌರವಾಧ್ಯಕ್ಷ ಡಾ.ಜಿ.ಬಿ. ರಾಜ್ ಮಾತನಾಡಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಜನರಲ್ಲಿ ವೈಜ್ಞಾನಿಕ ಮನೋಭಾವನೆ ಅಭಿವೃದ್ಧಿ ಪಡಿಸಲು ನಿರಂತರವಾಗಿ ಶ್ರಮಿಸುತ್ತಿದ್ದು, ಅನೇಕ ಜಾಗೃತಿ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಮತ್ತು ಜನಸಾಮಾನ್ಯರಿಗೆ ಆಯೋಜಿಸುತ್ತಿದೆ ಎಂದರು.

ಖಗೋಳ ತಜ್ಞ ಎಂ.ಟಿ. ಶರಣಪ್ಪ 'ಖಗೋಳ ವಿಸ್ಮಯ' ಕುರಿತು ಉಪನ್ಯಾಸ ನೀಡಿದರು. ಧ.ರಾ.ಮ. ಕಾಲೇಜಿನ ಪ್ರಾಚಾರ್ಯೆ ಡಾ. ರೂಪಶ್ರೀ, ಐ.ಕ್ಯೂ.ಎ.ಸಿ. ಸಂಯೋಜಕ ಡಾ. ಮಂಜುರಾಜ್, ಬಾಲಭವನ ಸಂಯೋಜಕಿ ಎಸ್.ಬಿ. ಶಿಲ್ಪ, ಎಂ. ಗುರುಸಿದ್ಧಸ್ವಾಮಿ ಇದ್ದರು.

# ಕಾಂಗ್ರೆಸ್ ಸೇರಿದ ಸಿ.ಪಿ.ಯೋಗೇಶ್ವರ್



ಬೆಂಗಳೂರು, ಅ.23 - ವಿಧಾನಸಭಾ ಉಪ ಚುನಾವಣೆಯ ಹೊಸ್ತಿಲಲ್ಲಿ ಬಿಜೆಪಿ ತೊರೆದ ಸಿ.ಪಿ.ಯೋಗೇಶ್ವರ್ ಅವರು ನಿರೀಕ್ಷೆಯಂತೆ ಕಾಂಗ್ರೆಸ್ ಸೇರ್ಪಡೆಗೊಂಡಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಉಪ ಮುಖ್ಯಮಂತ್ರಿಯೂ ಆಗಿರುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಯೋಗೇಶ್ವರ್ ಅವರಿಗೆ ಪಕ್ಷದ ಲಾಂಛನ ನೀಡುವ ಮೂಲಕ ಸೇರ್ಪಡೆ ಮಾಡಿಕೊಂಡರು.

ಇದಕ್ಕೂ ಮುನ್ನ ಶಿವಕುಮಾರ್ ಹಾಗೂ ಅವರ ಸಹೋದರ ಸುರೇಶ್ ಮಂಡ್ಯ ಜಿಲ್ಲಾ ಕಾಂಗ್ರೆಸ್ ಶಾಸಕರ ಜೊತೆಗೂಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಯೋಗೇಶ್ವರ್ ಆಶೀರ್ವಾದ ಪಡೆದುಕೊಂಡರು.

ಯೋಗೇಶ್ವರ್ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುವ ಉದ್ದೇಶದಿಂದಲೇ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಅವರು, ಮೈಸೂರು ಪ್ರವಾಸದಿಂದ ನಿನ್ನೆ ರಾತ್ರಿ ನಗರಕ್ಕೆ ಹಿಂದಿರುಗಿದ್ದರು.

ಪಕ್ಷದ ವರಿಷ್ಠರ ಸೂಚನೆ ಮೇರೆಗೆ ಶಿವಕುಮಾರ್ ಅವರು ಕೇರಳ ಪ್ರವಾಸ ರದ್ದುಗೊಳಿಸಿ, ನಗರದಲ್ಲೇ ಉಳಿದು ಯೋಗೇಶ್ವರ್ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ಪ್ರಾಥಮಿಕ ಸದಸ್ಯತ್ವ ನೀಡಿದರು. ನಂತರ ಯೋಗೇಶ್ವರ್ ಉಪ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಜಿಯನ್ನು ಪಡೆದರು.

ಯೋಗೇಶ್ವರ್ ಕಾಂಗ್ರೆಸ್ ಸೇರುವುದು ಖಚಿತಗೊಂಡಿದ್ದರೂ ಕಳೆದ ಮೂರು ದಿನಗಳಿಂದ ಬಿಜೆಪಿ, ಜೆಡಿಎಸ್ ಹಾಗೂ ಕಾಂಗ್ರೆಸ್‌ನ ಮುಖಂಡರಿಗೂ ಅವರ ನಡೆಯನ್ನು ಭಾರೀ ಗೌಪ್ಯವಾಗಿ ಇಟ್ಟಿದ್ದಲ್ಲದೆ, ಕೆಲವು ನಾಟಕೀಯ ಬೆಳವಣಿಗೆಗಳು ನಡೆದವು.

ಯೋಗೇಶ್ವರ್ ಅವರು ಬಿಎಸ್ಪಿ ಅಥವಾ ಎಸ್ಪಿಯಿಂದ ಕಣಕ್ಕಿಳಿಯಲು ಆ ಪಕ್ಷಗಳ ಬಿ ಫಾರಂ ಅನ್ನು ಪಡೆದುಕೊಂಡಿದ್ದರು. ಯಡಿಯೂರಪ್ಪ ಅವರ ವಿರೋಧಿ ಬಣ ಯೋಗೇಶ್ವರ್ ಅವರನ್ನು ಪಕ್ಷದಲ್ಲಿ ಉಳಿಸಿಕೊಳ್ಳಲು ರಾಷ್ಟ್ರೀಯ ನಾಯಕರ ಜೊತೆ ನಡೆಸಿದ ಪ್ರಯತ್ನ ಒಂದು ಹಂತದಲ್ಲಿ ಯಶಸ್ವಿಯೂ ಆಗಿತ್ತು.

ಜೆಡಿಎಸ್ ಚಿಹ್ನೆಯಡಿ ಯೋಗೇಶ್ವರ್ ಅವರನ್ನು ಚುನಾವಣಾ ಕಣಕ್ಕಿಳಿಸಲು ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಒಪ್ಪಿಸಿದ್ದರು. ಆದರೆ, ರಾಜಕೀಯ ಚಾಣಾಕ್ಯತನ ತೋರಿ ಎನ್‌ಡಿಎ ಕೂಟದ ಮುಖಂಡರ ನಿಲುವಿಗೆ ವಿರುದ್ಧವಾಗಿ ಮತ್ತೆ ಹಸ್ತದ ಕೈಹಿಡಿದರು. ಕಳೆದ ಎರಡೂವರೆ ದಶಕಗಳ ರಾಜಕೀಯದಲ್ಲಿ ಆರು ಬಾರಿ ಪಕ್ಷಾಂತರ ಮಾಡಿದ್ದಾರೆ.

ಕೆಸಿಪಿ, ಕಾಂಗ್ರೆಸ್, ಬಿಎಸ್ ಪಿ, ಎಸ್ ಪಿ, ಬಿಜೆಪಿ ಪಕ್ಷಗಳಲ್ಲದೆ, ಪಕ್ಷೇತರವಾಗಿ ಒಮ್ಮೆ ಸ್ಪರ್ಧಿಸಿ ವಿಧಾನಸಭೆ ಪ್ರವೇಶಿಸಿದ್ದರು. ಆದರೆ, ಕಳೆದ ಎರಡು ವಿಧಾನಸಭಾ ಚುನಾವಣೆಗಳಲ್ಲಿ ಅವರು ಹೆಚ್.ಡಿ.ಕುಮಾಸ್ವಾಮಿ ವಿರುದ್ಧ ಬಿಜೆಪಿಯಿಂದ ಸ್ಪರ್ಧಿಸಿ ಪರಾಭವಗೊಂಡಿದ್ದರು.

# ಕಾಂಗ್ರೆಸ್ ದುರ್ಬಲ ಎಂದು ಒಪ್ಪಿದಂತಾಗಿದೆ



ಬೆಂಗಳೂರು, ಅ.23- ಮಾಜಿ ಸಚಿವ ಸಿ.ಪಿ. ಯೋಗೇಶ್ವರ್ ಅವರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ಚನ್ನಪಟ್ಟಣದಲ್ಲಿ ದುರ್ಬಲವೆಂದು ಕಾಂಗ್ರೆಸ್ ಪಕ್ಷ ಒಪ್ಪಿಕೊಂಡಂತಾಗಿದೆ ಎಂದು ರಾಜ್ಯ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿಶ್ಲೇಷಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯೋಗೇಶ್ವರ್ ಅವರು ಕಾಂಗ್ರೆಸ್ಸಿಗೆ ಹೋದುದರಿಂದ ಒಂದಂತೂ ನಾವು ಊಹಿಸಬಹುದು. 136 ಶಾಸಕರಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಂತಹ ಪ್ರಬಲ ನಾಯಕರನ್ನು ಹೊಂದಿರುವ ಕಾಂಗ್ರೆಸ್ ಪಕ್ಷ ಚನ್ನಪಟ್ಟಣದಲ್ಲಿ ದುರ್ಬಲ ಎಂದು ಅವರೇ ಒಪ್ಪಿಕೊಂಡಂತಾಗಿದೆ ಎಂದು ಟೀಕಿಸಿದರು.

ಬೆಂಗಳೂರಿನಲ್ಲಿ ಜನರ ಬದುಕು ಬೀದಿಗೆ ಬಿದ್ದಿದೆ. ಇವತ್ತು ಜನಹಿತ ಮರೆತ ಸರ್ಕಾರ ರಾಜ್ಯದಲ್ಲಿದೆ.

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳಿಗೆ ಸೋನಿಯಾ ಗಾಂಧಿ, ಪ್ರಿಯಾಂಕ ಗಾಂಧಿಯನ್ನು ಸ್ವಾಗತ ಮಾಡುವುದು ಜನರ ಬದುಕಿಗೆ ಸ್ಪಂದಿಸುವುದಕ್ಕಿಂತ ಮುಖ್ಯವಾಗಿದೆ. ಜನರ ಸಮಸ್ಯೆಗಳಿಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು ಸ್ಪಂದಿಸುತ್ತಿಲ್ಲ. ಇಂಥ ಸರ್ಕಾರ ಏಕಿರಬೇಕು ಎಂದವರು ಇದೇ ಸಂದರ್ಭದಲ್ಲಿ ಪ್ರಶ್ನಿಸಿದರು.

ಮಳೆಯಿಂದ ಕಟ್ಟಡ ಕುಸಿತ ಸೇರಿ ಮಳೆ ಕಾರಣಕ್ಕೆ 8ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಈ ಸರ್ಕಾರಕ್ಕೆ ಮಾನವೀಯತೆ ಇದೆಯೇ? ಸ್ಪಂದನೆ ಏನು? ಭ್ರಷ್ಟಾಚಾರದಲ್ಲಿ ತೊಡಗಿದ್ದು, ಬದುಕಿದ್ದೂ ಸತ್ತಂತಿರುವ ಸರ್ಕಾರ ಇಲ್ಲಿದೆ ಎಂದು ಟೀಕಿಸಿದರು.

# ಯೋಗೇಶ್ವರ್ ಭವಿಷ್ಯ ಹಾಳು ಮಾಡಿಕೊಂಡ್ರು



ಬೆಂಗಳೂರು, ಅ.23- ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್ ಸೇರುವ ಮೂಲಕ ತಮ್ಮ ರಾಜಕೀಯ ಭವಿಷ್ಯ ಹಾಳು ಮಾಡಿಕೊಂಡಿದ್ದಾರೆ. ಕಾಂಗ್ರೆಸ್‌ನಿಂದ ಚನ್ನಪಟ್ಟಣದಲ್ಲಿ ಸ್ಪರ್ಧಿಸಿದರೆ ಅವರಿಗೆ ಲೀಡ್ ದೊರೆಯುವುದಿಲ್ಲ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಜೆಡಿಎಸ್ ನಾಯಕರು, ಕಾರ್ಯಕರ್ತರನ್ನು ಒಪ್ಪಿಸಿದ್ದು, ಸಿ.ಪಿ.ಯೋಗೇಶ್ವರ್ ಅವರಿಗೆ ಚನ್ನಪಟ್ಟಣ ಕ್ಷೇತ್ರದ ಟಿಕೆಟ್ ನೀಡಲು ತಯಾರಾಗಿದ್ದರು. ನಾನೂ ಸೇರಿದಂತೆ ಎಲ್ಲ ಬಿಜೆಪಿ ನಾಯಕರು ಅವರಿಗೆ ಬೆಂಬಲ ನೀಡಿದ್ದೆವು. ಅವರಿಗೆ ಟಿಕೆಟ್ ಸಿಗಲು ಎಲ್ಲಾ ಪ್ರಯತ್ನ ಮಾಡಿದ್ದೆವು. ಅವರು ಪಕ್ಷ ತೊರೆಯುವ ಮೂಲಕ ಪಕ್ಷಕ್ಕೆ ದ್ರೋಹ ಮಾಡಿದ್ದಾರೆ ಎಂದು ಆರೋಪಿಸಿದರು.

ಈಗ ಬಿಜೆಪಿ-ಜೆಡಿಎಸ್ ಮೈತ್ರಿ ಇದೆ. ಕೋಲಾರದಲ್ಲಿ ಈ ಹಿಂದೆ ಬಿಜೆಪಿ ಗೆದ್ದಿತ್ತು. ಈ ಲೋಕಸಭಾ ಚುನಾವಣೆಯಲ್ಲಿ ಅಲ್ಲಿ ಜೆಡಿಎಸ್‌ಗೆ ಅವಕಾಶ ನೀಡಲಾಗಿದೆ.

ಮಂಡ್ಯದಲ್ಲಿ ಈ ಹಿಂದೆ ಸುಮಲತಾ ಸ್ಪರ್ಧಿಸಿದ್ದರು. ಬಳಿಕ ಹೆಚ್.ಡಿ.ಕುಮಾರಸ್ವಾಮಿ ಅಲ್ಲಿ ಗೆದ್ದರು. ಇಲ್ಲಿ ಬಿಜೆಪಿ, ಜೆಡಿಎಸ್ ಎಂಬುದಕ್ಕಿಂತ ಎನ್‌ಡಿಎ ಗೆಲ್ಲಬೇಕು ಎಂಬ ಉದ್ದೇಶ ಇತ್ತು ಎಂದು ತಿಳಿಸಿದರು.

## ಯೋಗೇಶ್ವರ್‌ರಲ್ಲಿ ಕಾಂಗ್ರೆಸ್ ರಕ್ತ ಹರಿಯುತ್ತಿದೆ : ಡಿಕೆಶಿ

ಬೆಂಗಳೂರು, ಅ.23- ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಅವರಲ್ಲಿ ಕಾಂಗ್ರೆಸ್ ರಕ್ತ ಹರಿಯುತ್ತಿದೆ. ಈ ಕಾರಣಕ್ಕೆ ಯಾವುದೇ ಷರತ್ತುಗಳನ್ನು ವಿಧಿಸದೇ ಅವರು ಮತ್ತೊಮ್ಮೆ ಮರಳಿ ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿ ಯಲ್ಲಿ ನಡೆದ ಸಿ.ಪಿ.ಯೋಗೇ ಶ್ವರ್ ಅವರ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಿಂದಲೇ ಅವರ ರಾಜಕಾರಣ ಪ್ರಾರಂಭ ವಾಗಿತ್ತು. ಮತ್ತೊಮ್ಮೆ ಇದೇ ಪಕ್ಷದಿಂದಲೇ ರಾಜಕಾರಣ ಪ್ರಾರಂಭ ಮಾಡಬೇಕು ಎಂದು ಸಿ.ಪಿ.ಯೋಗೇಶ್ವರ್ ಅವರು ಬೆಳಿಗ್ಗೆ ಭೇಟಿ ಮಾಡಿ ತಮ್ಮ ಅಭಿಪ್ರಾಯ ತಿಳಿಸಿದರು. ಇಷ್ಟು ದಿನ ಎನ್‌ಡಿಎಯಲ್ಲಿದ್ದೂ, ಮತ್ತೆ ಕಾಂಗ್ರೆಸ್ಸಿಗನಾಗಿ ಮುಂದುವರೆಯಬೇಕು ಎಂದು ಪಕ್ಷ ಸೇರ್ಪಡೆಯಾಗುತ್ತಿದ್ದಾರೆ ಎಂದರು.

# ಪಂಚಾಯ್ತಿ ಹಂತದಲ್ಲಿ ಹವಾಮಾನ ಮುನ್ಸೂಚನೆ ವ್ಯವಸ್ಥೆಗೆ ಚಾಲನೆ

ನವದೆಹಲಿ, ಅ. 23 - ಗ್ರಾಮ ಪಂಚಾಯಿತಿಗಳ ಹಂತದಲ್ಲಿ ಐದು ದಿನಗಳ ಹವಾಮಾನ ಮುನ್ಸೂಚನೆ ನೀಡುವ ವ್ಯವಸ್ಥೆಯನ್ನು ಗುರುವಾರ ಕೇಂದ್ರ ಪಂಚಾಯತ್ ರಾಜ್ ಸಚಿವಾಲಯ ಉದ್ಘಾಟಿಸಲಿದೆ. ಹವಾಮಾನ ಇಲಾಖೆಯ ಸಹಯೋಗದಲ್ಲಿ ಗ್ರಾಮ ಪಂಚಾಯಿತಿ ಹಂತದಲ್ಲಿ ಹವಾಮಾನ ಮುನ್ಸೂಚನೆ ನೀಡುವ ಯೋಜನೆ ಜಾರಿಗೆ ತರಲಾಗುವುದು. ಇದರಿಂದಾಗಿ ಪಂಚಾಯಿತಿಗಳು ತಮ್ಮ ಭಾಗದ ಹವಾಮಾನ ಕುರಿತು ಪ್ರತಿ ಗಂಟೆಗೆ ಒಮ್ಮೆ ಮಾಹಿತಿ ಪಡೆಯಬಹುದು. ಇದರಿಂದ ಗ್ರಾಮಸ್ಥರು ಹಾಗೂ ರೈತರಿಗೆ ನೆರವಾಗುವ ನಿರೀಕ್ಷೆ ಇದೆ.

# ಬೆಂಗಳೂರು ಕಟ್ಟಡ ಕುಸಿತ ಸಾವಿನ ಸಂಖ್ಯೆ 8ಕ್ಕೆ ಏರಿಕೆ

ಬೆಂಗಳೂರು, ಅ. 23 - ಇಲ್ಲಿನ ಬಾಬು ಸಾ ಪಾಳ್ಯದಲ್ಲಿ ನಿರ್ಮಾಣ ಹಂತದ ಕಟ್ಟಡ ಕುಸಿದ ಘಟನೆಯಲ್ಲಿ ಮೃತರ ಸಂಖ್ಯೆ ಎಂಟಕ್ಕೆ ಏರಿಕೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಗ್ನಿಶಾಮಕ ದಳ, ಎನ್.ಡಿ.ಆರ್.ಎಫ್. ಹಾಗೂ ಎಸ್.ಡಿ.ಆರ್.ಎಫ್. ತಂಡಗಳು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದವು.

ಈ ಘಟನೆಗೆ ಸಂಬಂಧಿಸಿದಂತೆ ಇಬ್ಬರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ. ನಾಲ್ಕು ಮಹಡಿಗಳ ಕಟ್ಟಡಕ್ಕೆ ಮಾತ್ರ ಅನುಮತಿ ಪಡೆಯ ಲಾಗಿತ್ತು. ಆದರೆ, ಏಳು ಅಂತಸ್ತಿನ ಕಟ್ಟಡ ನಿರ್ಮಿಸಲಾ ಗುತ್ತಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಮಂಗಳವಾರ ಒಬ್ಬರ ಮೃತ ದೇಹ ಪತ್ತೆಯಾಗಿತ್ತು. ಬುಧವಾರದಂದು ಇನ್ನೂ ಏಳು ಮೃತ ದೇಹಗಳು ಪತ್ತೆಯಾಗಿವೆ. 13 ಜನರನ್ನು ರಕ್ಷಿಸಲಾಗಿದ್ದು, ಇವರಲ್ಲಿ ಆರು ಜನ ಗಾಯಗೊಂಡಿದ್ದಾರೆ. ಅವಶೇಷಗಳಡಿ ಇನ್ನಷ್ಟು ಜನ ಸಿಲುಕಿದ್ದಾರೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ.

ಸ್ಥಳಕ್ಕೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರು ಭೇಟಿ ನೀಡಿದ್ದು, ಇಂತಹ ಘಟನೆಗಳು ಮರುಕಳಿಸದಿರಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಹೊರಮಾವು ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಕೆ.ವಿನಯ್ ಅವರನ್ನು ಅಮಾನತು ಮಾಡಿ ಬಿಬಿಎಂಪಿ ಆಯುಕ್ತರು ಆದೇಶ ಹೊರಡಿಸಿದ್ದಾರೆ.

# ಶೀಘ್ರ ರಾಣಿ ಚೆನ್ನಮ್ಮ ಪ್ರತಿಮೆ

(1ನೇ ಪುಟದಿಂದ) ವಿರುದ್ಧ ಹೋರಾಟ ನಡೆಸುವವರಿಗೆ ಸ್ಫೂರ್ತಿಯಾಗಿದೆ. ಪ್ರತಿಯೊಬ್ಬ ಮಹಿಳೆಗೂ ಚೆನ್ನಮ್ಮನ ವೀರ ವನಿತಾ ಸ್ಫೂರ್ತಿ, ಮಾರ್ಗದರ್ಶಕವಾಗಿದೆ ಎಂದು ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, 1824ರಲ್ಲಿ ಕಿತ್ತೂರಿನ ಪುಟ್ಟ ಸಂಸ್ಥಾನದ ರಾಣಿ ಚೆನ್ನಮ್ಮ ಅವರು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿ ಗೆಲುವು ಸಾಧಿಸಿದ್ದು ಭಾರತದ ಇತಿಹಾಸದಲ್ಲಿ ಮಹತ್ವದ ಘಟನೆಗಳಲ್ಲಿ ಒಂದಾಗಿದೆ. ಚೆನ್ನಮ್ಮನ ಇತಿಹಾಸವನ್ನು ಸರಿಯಾಗಿ ಅಧ್ಯಯನ ಮಾಡಬೇಕಿದೆ ಹಾಗೂ ಮುಂದಿನ ಪೀಳಿಗೆಗೆ ತಿಳಿಸಬೇಕಿದೆ ಎಂದರು.

ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್ ಮಾತನಾಡಿ, ಚೆನ್ನಮ್ಮ ಉತ್ತರ ಭಾರತದಲ್ಲಿ ರಾಣಿಯಾಗಿದ್ದರೆ ಹೆಚ್ಚು ಪ್ರಚಾರ ಹಾಗೂ ಮಾನ್ಯತೆ ಸಿಗುತ್ತಿತ್ತು. ಆದರೆ, ಈಗ ರಾಣಿ ಚೆನ್ನಮ್ಮನ ಕುರಿತು ಇತಿಹಾಸದ ಪುಟಗಳಲ್ಲಿ ಸಮರ್ಪಕವಾಗಿ ಮಾಹಿತಿ ದಾಖಲಾಗಿಲ್ಲ ಎಂದರು.

ಗೀಗೀ ಪದ, ಲಾವಣಿ ಪದಗಳು, ಜಾನಪದಗಳಲ್ಲಿ ಚೆನ್ನಮ್ಮನ ಇತಿಹಾಸ ಇದೆ. ಬ್ರಿಟನ್ ಹಾಗೂ ಪುಣೆಯ ಪತ್ರಾಗಾರಗಳಲ್ಲಿನ ಮಾಹಿತಿಯನ್ನು ಹೊರ ತೆಗೆಯಬೇಕಿದೆ. ಉತ್ಖನನದ ಮೂಲಕವೂ ಇತಿಹಾಸದ ಮಾಹಿತಿಯ ಹೊರ ತೆಗೆಯುವ ಅಗತ್ಯವಿದೆ ಎಂದು ಹೇಳಿದರು.

ಮಾಜಿ ಮೇಯರ್ ಹಾಗೂ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ರಾಜ್ಯ ಯುವ ಸಂಘದ ಅಧ್ಯಕ್ಷ ಬಿ.ಜಿ. ಅಜಯ್ ಕುಮಾರ್ ಮಾತನಾಡಿ, ಪಂಚಮಸಾಲಿ ಸಮಾಜದವರು ರಾಜ್ಯದಲ್ಲಿ 1.3 ಕೋಟಿಯಷ್ಟಿದ್ದಾರೆ. ಸಮಾಜ ಒಂದಾದಾಗ ಮಾತ್ರ ಬೇಡಿಕೆಗಳು ಈಡೇರಲು ಸಾಧ್ಯ ಎಂದರು.

ಜವಳಿ ಉದ್ಯಮಿ ಹಾಗೂ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಬಿ.ಸಿ. ಉಮಾಪತಿ ಮಾತನಾಡಿ, ರಾಜ್ಯ ಸರ್ಕಾರವು ಪಂಚಮಸಾಲಿ ಸಮಾಜಕ್ಕೆ ಒ.ಬಿ.ಸಿ. ಮಾನ್ಯತೆ ನೀಡಿದರೆ, ಕೇಂದ್ರದಲ್ಲೂ ಇದೇ ಮಾನ್ಯತೆ ಸಿಗಲಿದೆ. ಈ ಬಗ್ಗೆ ಶೀಘ್ರದಲ್ಲೇ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಉಪನ್ಯಾಸ ನೀಡಿದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಪಿ. ವೀಣಾ, ದೇಶದ ಮೊದಲ ಸ್ವಾತಂತ್ರ್ಯ ಹೋರಾಟವಾದ ಸಿಪಾಯಿ ದಂಗೆಗೆ 33 ವರ್ಷ ಮೊದಲೇ ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಡಿ ಗೆಲುವು ಸಾಧಿಸಿದ್ದರು ಎಂದರು.

ವೇದಿಕೆಯ ಮೇಲೆ ಪಾಲಿಕೆ ಮೇಯರ್ ಚಮನ್ ಸಾಬ್, ಉಪ ಮೇಯರ್ ಸೋಗಿ ಶಾಂತಕುಮಾರ್, ಅಖಿಲ ಭಾರತ ಲಿಂಗಾಯುತ ಪಂಚಮಸಾಲಿ ಮಹಾಸಭಾದ ಜಿಲ್ಲಾಧ್ಯಕ್ಷ ಆರ್.ಬಿ. ಅಶೋಕ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ತಹಶೀಲ್ದಾರ್ ಅಶ್ವತ್ಥ್, ಎಎಸ್‌ಪಿ ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

## ಟರ್ಕಿಯ ರಕ್ಷಣಾ ಕಂಪನಿ ಮೇಲೆ ಉಗ್ರರ ದಾಳಿ :4 ಸಾವು

ಅಂಕಾರ, ಅ. 23 - ಟರ್ಕಿಯ ಸರ್ಕಾರಿ ಸ್ವಾಮ್ಯದ ರಕ್ಷಣಾ ಕಂಪನಿಯಾದ ಟುಸಾಸ್ ಮೇಲೆ ಉಗ್ರರು ದಾಳಿ ನಡೆಸಿ, ನಾಲ್ವರನ್ನು ಹತ್ಯೆಗೈದಿದ್ದಾರೆ ಹಾಗೂ ಹಲವರನ್ನು ಗಾಯಗೊಳಿಸಿದ್ದಾರೆ.

ದಾಳಿಯಲ್ಲಿ ಭಾಗಿಯಾಗಿದ್ದ ಕನಿಷ್ಠ ಇಬ್ಬರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಂಪನಿಯು ಟರ್ಕಿ ರಾಜಧಾನಿ ಅಂಕಾರ ಹೊರವಲಯದಲ್ಲಿದೆ. ಈ ದಾಳಿಯ ಹಿಂದೆ ಯಾರಿದ್ದಾರೆ ಎಂಬುದು ಸ್ಪಷ್ಟವಾಗಿಲ್ಲ. ಕುರ್ದಿಶ್ ಉಗ್ರರು, ಇಸ್ಲಾಮಿಕ್ ಸ್ಟೇಟ್ ಹಾಗೂ ಎಡಪಂಥೀಯ ತೀವ್ರವಾದಿಗಳು ಈ ಹಿಂದೆ ದೇಶದಲ್ಲಿ ದಾಳಿ ನಡೆಸಿದರು.

# ತುಂಬಿದ ಹೊನ್ನೂರು ಕೆರೆ

(1ನೇ ಪುಟದಿಂದ) ತುಂಗಭದ್ರಾ ನದಿಯಿಂದ 22 ಕೆರೆ ಏತ ನೀರಾವರಿ ಯೋಜನೆಯಿದ್ದು, ಅದು ಅವೈಜ್ಞಾನಿಕವಾಗಿರುತ್ತದೆ. ಅಳವಡಿಸಿರುವ ಪೈಪ್‌ಲೈನ್‌ಗಳು ಪದೇ ಪದೇ ಹೊಡೆದು 2 ಪಂಪ್‌ಹೌಸ್ ಹಾಗೆ ನಿಂತಿವೆ.

ಆದರೆ, ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಹೊನ್ನೂರು ಕೆರೆ ಭರ್ತಿಯಾಗಿರುವುದು ಈ ಭಾಗದ ಜನರಿಗೆ ವರುಣನ ಕೃಪೆಯಾಗಿದೆ ಎಂದು ಮಲ್ಲಶೆಟ್ಟಿಹಳ್ಳಿ ಗ್ರಾಮದ 22 ಕೆರೆ ಹೋರಾಟ ಸಮಿತಿಯ ಉಪಾಧ್ಯಕ್ಷ ಜಿ.ಎಸ್. ರೇವಣಸಿದ್ದಪ್ಪ ದಳಪತಿ ಹೇಳಿದರು.

# ಪೌರಾಯುಕ್ತರ ವಿರುದ್ಧ ಪ್ರತಿಭಟನೆ

(1ನೇ ಪುಟದಿಂದ) ಆಕ್ರೋಶ ವ್ಯಕ್ತಪಡಿಸಿದರು.

ಹರಿಹರ ನಗರದಲ್ಲೇ ಪ್ರಥಮ ಬಾರಿಗೆ ನಗರಸಭೆ ಅಧ್ಯಕ್ಷರು, ಸದಸ್ಯರು ಪೌರಾಯುಕ್ತರ ವಿರುದ್ಧ ಪ್ರತಿಭಟನೆ ಮಾಡಿದ್ದು ಇತಿಹಾಸವಾಗಿದೆ. ಇವರನ್ನು ವರ್ಗಾವಣೆ ಮಾಡುವಲ್ಲಿ ತಡ ಮಾಡಿದರೆ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪತ್ರಿಭಟನೆ ಮಾಡಬೇಕಾದೀತು ಎಂದು ಎಚ್ಚರಿಸಿದರು.

ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಮಾತನಾಡಿ, ದಿನದ 24 ಗಂಟೆಯ ಸಮಯದಲ್ಲಿ ಕರ್ತವ್ಯ ನಿರ್ವಹಣೆ ಮಾಡಬೇಕೆಂದು ಸರ್ಕಾರದ ಆದೇಶ ಇದ್ದು, ಇದರಿಂದ ಬೆಳಿಗ್ಗೆ ನಗರದ ಹಲವಾರು ವಾರ್ಡಿಗೆ ಭೇಟಿ ಕೊಟ್ಟು, ರಾತ್ರಿ ಕಚೇರಿಯಲ್ಲಿ ಕುಳಿತುಕೊಂಡು ಮೂರು ವರ್ಷಗಳಿಂದ ಆಗದಿರುವ ಟೆಂಡರ್ ಸಂಬಂಧಿಸಿದ ಕೆಲಸವನ್ನು ಮಾಡುತ್ತಿದ್ದೇನೆ. ಜನರ ಬಗ್ಗೆ ಕಾಳಜಿ ಇರುವ ಕಾರಣ ಹಗಲು - ರಾತ್ರಿ ಎನ್ನದೆ ಶ್ರಮವಹಿಸಿ ಕೆಲಸ ಮಾಡುವುದನ್ನು ಸಹಿಸಿಕೊಳ್ಳದೆ ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಸಮರ್ಥಿಸಿಕೊಂಡರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ಬಿ.ಅಲ್ತಾಫ್, ಮುಜಾಮಿಲ್ ಬಿಲ್ಲು, ಕಾಂಗ್ರೆಸ್ ಪಕ್ಷದ ಮುಖಂಡ ಸನಾವುಲಾ ಸಾಬ್, ಜೆಡಿಸ್ ಪಕ್ಷದ ಮುಖಂಡರಾದ ಫೈನಾನ್ಸ್ ಮಂಜುನಾಥ್, ಜಾಕೀರ್, ಮನಸೂರು ಮದ್ದಿ, ಮಾರುತಿ ಬೇಡರ್ ಇತರರು ಹಾಜರಿದ್ದರು,

# ಪ್ರಿಯಾಂಕ ಗಾಂಧಿ ನಾಮಪತ್ರ ಸಲ್ಲಿಕೆ

(1ನೇ ಪುಟದಿಂದ) ಪ್ರಿಯಾಂಕಾ ಗಾಂಧಿ ಅವರು ಇದೆ ಮೊದಲ ಬಾರಿಗೆ ಚುನಾವಣಾ ಕಣಕ್ಕೆ ಇಳಿದಿದ್ದಾರೆ.

ತಮ್ಮ ತಾಯಿ ಹಾಗೂ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷ ಸೋನಿಯಾ ಗಾಂಧಿ ಅವರೊಂದಿಗೆ ಪ್ರಿಯಾಂಕ ವಯನಾಡಿಗೆ ಬಂದಿದ್ದರು.

ನಂತರ ತಮ್ಮ ಸಹೋದರ ಹಾಗೂ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಜೊತೆ ಬೃಹತ್ ರೋಡ್ ಶೋ ನಡೆಸಿದರು.

# ಭಾರತ್ ಬ್ರಾಂಡ್‌ಗೆ ಇನ್ನೆರಡು ಬೇಳೆ

ನವದೆಹಲಿ, ಅ. 23 - ಸಬ್ಸಿಡಿ ದರದಲ್ಲಿ ಧಾನ್ಯಗಳನ್ನು ವಿತರಿಸುವ ಭಾರತ್ ಬ್ರಾಂಡ್ ಯೋಜನೆಯ ವ್ಯಾಪ್ತಿಗೆ ಕಡಲೆ ಬೇಳೆ ಹಾಗೂ ಮಸೂರ್ ಬೇಳೆಗಳನ್ನು ಸೇರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಕಡಲೆ ಬೇಳೆಯನ್ನು ಕೆಜಿಗೆ 58 ರೂ. ಹಾಗೂ ಮಸೂರ್ ಬೇಳೆಯನ್ನು ಕೆ.ಜಿ.ಗೆ 89 ರೂ. ಬೆಲೆಯಲ್ಲಿ ಮಾರಲಾಗುವುದು. ಎನ್.ಸಿ.ಸಿ.ಎಫ್., ನಫೆಡ್ ಹಾಗೂ ಕೇಂದ್ರೀಯ ಭಂಡಾರಗಳ ಮೂಲಕ ಮಾರಾಟ ನಡೆಯಲಿದೆ.


ನಿಯಮ 14(3)

ನಮೂನೆ-12

**ಗೌರವ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರುನಲ್ಲಿ ದಾಖಲಾದ ಡಬ್ಲ್ಯೂ.ಪಿ.ನಂ:17366/ 2024 (ಸಿಎಸ್-ಇಎಲ್/ಎಂ) ಆದೇಶ ದಿನಾಂಕ:05-9-2024 ಸ್ವೀಕೃತಗೊಂಡ ದಿನಾಂಕ:24-9-2024 ರ ಆದೇಶದ ಪ್ರಕಾರ ಮುಂದುವರೆಸಲಾದ ಚುನಾವಣಾ ಪ್ರಕ್ರಿಯೆಯ ಚುನಾವಣಾ ಸೂಚನೆ:**

**ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ, ದಾವಣಗೆರೆ ತಾ:ಜಿ:**

**ಇದರ ಮುಂದಿನ 5 ವರ್ಷದ ಅವಧಿಗೆ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ-2024-25**

ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು, ಇದರ ಅಧಿಸೂಚನೆ ಸಂಖ್ಯೆ:ಸಚುಪ್ರಾ/ಬೆಂ.ಪ್ರಾ/ದಾಜಿ/ರಿಆನೇ/10/2023-24 ದಿನಾಂಕ:01-12-2023ರ ಪ್ರಕಾರ ನನ್ನನ್ನು ರಿಟರ್ನಿಂಗ್ ಅಧಿಕಾರಿಯನ್ನಾಗಿ ನೇಮಕ ಮಾಡಿದ್ದು, ಸದರಿ ಕಾರ್ಖಾನೆಯ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ ದಿನಾಂಕ:04-11-2024 ರಂದು ಸೋಮವಾರದಂದು ಬೆಳಗ್ಗೆ 9.00 ರಿಂದ ಸಾಯಂಕಾಲ 4.00 ಗಂಟೆಯವರೆಗೆ ಕಾರ್ಖಾನೆಯ ಕಛೇರಿಯಲ್ಲಿ ಜರುಗುವ ಚುನಾವಣಾ ಕಾರ್ಯಕ್ರಮದ ಪ್ರಕಟಣೆ ವಿವರ ಈ ಕೆಳಗಿನಂತೆ ಇರುತ್ತದೆ.

**ಕಾರ್ಖಾನೆಯ ಬೈಲಾ ನಂ.40.1ರ ಪ್ರಕಾರ ಚುನಾಯಿಸಬೇಕಾದ "ಎ" ವರ್ಗದ ಬೆಳೆಗಾರ ಸದಸ್ಯರ ನಿರ್ದೇಶಕರ ಒಟ್ಟು ಸಂಖ್ಯೆ:17 (ಹದಿನೇಳು) ಇವುಗಳಲ್ಲಿ**

| | | | |
|---|---|---|---|
| i) | "ಎ" ವರ್ಗದ ಬೆಳೆಗಾರ ಸದಸ್ಯರಿಂದ ಚುನಾಯಿಸಬೇಕಾದ ಒಟ್ಟು ನಿರ್ದೇಶಕರ ಸಂಖ್ಯೆ. | | 17 (ಹದಿನೇಳು) |
| | (1) ಸಾಮಾನ್ಯ ಸ್ಥಾನಗಳು | | 11 (ಹನ್ನೊಂದು) |
| | (2) ಪರಿಶಿಷ್ಟ ಜಾತಿಗೆ ಮೀಸಲಿರಿಸಿದ ಸ್ಥಾನ | | 01 (ಒಂದು) |
| | (3) ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದ ಸ್ಥಾನ | | 01 (ಒಂದು) |
| | (4) ಹಿಂದುಳಿದ 'ಅ' ವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳು | | 01 (ಒಂದು) |
| | (5) ಹಿಂದುಳಿದ 'ಬ' ವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳು | | 01 (ಒಂದು) |
| | (6) ಮಹಿಳೆಯರಿಗೆ ಮೀಸಲಿರಿಸಿದ ಸ್ಥಾನಗಳು | | 02 ( ಎರಡು ) |
| | **ಒಟ್ಟು** | | **17 (ಹದಿನೇಳು)** |

**ಚುನಾವಣಾ ವೇಳಾ ಪಟ್ಟಿ**

| ಕ್ರ.ಸಂ. | ಚುನಾವಣೆ ಕಾರ್ಯ ಸೂಚಿ | ದಿನಾಂಕ ಮತ್ತು ಸಮಯ | ವಿವರ ಮತ್ತು ಸ್ಥಳ |
|---|---|---|---|
| 1) | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರೀಶಿಲನೆ [ನಿಯಮ 14(B)] | 28-10-2024 ಬೆಳಿಗ್ಗೆ 11.00 ಘಂಟೆಗೆ | ಕಾರ್ಖಾನೆ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ |
| 2) | ರಿಟರ್ನಿಂಗ್ ಅಧಿಕಾರಿಯಿಂದ ಅರ್ಹ ಉಮೇದುವಾರರ ಪಟ್ಟಿ ಪ್ರಕಟಣೆ [ನಿಯಮ 14(B(4))] | 28-10-2024 ನಾಮಪತ್ರಗಳ ಪರಿಶೀಲನೆ ನಂತರ | ಕಾರ್ಖಾನೆ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ |
| 3) | ಉಮೇದುವಾರರಿಂದ ನಾಮಪತ್ರಗಳನ್ನು ಹಿಂಪಡೆಯುವ ಕೊನೆಯ ದಿನಾಂಕ [ನಿಯಮ 14(C)] | 29-10-2024 ಬೆಳಿಗ್ಗೆ 11.00 ರಿಂದ ಮದ್ಯಾಹ್ನ 3.00 ರವರೆಗೆ | ಕಾರ್ಖಾನೆ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ |
| 4) | ರಿಟರ್ನಿಂಗ್ ಅಧಿಕಾರಿಗಳಿಂದ ಅಂತಿಮವಾಗಿ ಕಣದಲ್ಲಿ ಉಳಿದ ಉಮೇದುವಾರರ ಪಟ್ಟಿ ಪ್ರಕಟಣೆ [ನಿಯಮ 14(D)] | 29-10-2024 ಮಧ್ಯಾಹ್ನ 3.00 ಘಂಟೆ ನಂತರ | ಕಾರ್ಖಾನೆ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 5) | ಅವಶ್ಯವಿದ್ದಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ ಸ್ಪರ್ಧಿಗಳಿಗೆ ಚಿನ್ನೆಗಳನ್ನು ನೀಡುವಿಕೆ. [ನಿಯಮ 14(E)] | 29-10-2024 ಅರ್ಹ ಉಮೇದುವಾರರ ಯಾದಿ ಪ್ರಕಟಣೆ ನಂತರ | ಕಾರ್ಖಾನೆ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 6) | ರಿಟರ್ನಿಂಗ್ ಅಧಿಕಾರಿಗಳಿಂದ ಚಿಹ್ನೆಗಳೊಂದಿಗೆ ಅರ್ಹ ಉಮೇದುವಾರರ ಪಟ್ಟಿ ಪ್ರಕಟಣೆ [ನಿಯಮ14(E)&14(F) | 30-10-2024 ಮಧ್ಯಾಹ್ನ 04.00 ಘಂಟೆಗೆ | ಕಾರ್ಖಾನೆ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 7) | ಮತದಾನ ನಡೆಯುವ ದಿನಾಂಕ ಹಾಗೂ ಸಮಯ | 04-11-2024 ಬೆಳಿಗ್ಗೆ 9.00 ರಿಂದ ಮದ್ಯಾಹ್ನ 4.00 ರವರೆಗೆ | ಕಾರ್ಖಾನೆಯ ಆವರಣದಲ್ಲಿ |
| 8) | ಮತಗಳನ್ನು ಎಣಿಕೆ ಮಾಡುವ ದಿನಾಂಕ ಮತ್ತು ಸಮಯ | 04-11-2024 ಮತದಾನದ ನಂತರ | ಕಾರ್ಖಾನೆಯ ಆವರಣದಲ್ಲಿ |
| 9) | ರಿಟರ್ನಿಂಗ್ ಅಧಿಕಾರಿಗಳಿಂದ ಫಲಿತಾಂಶ ಘೋಷಣೆ | 04-11-2024 ಮತಗಳ ಎಣಿಕೆ ನಂತರ | ಎಣಿಕೆಯ ಸ್ಥಳದಲ್ಲಿ ಮತ್ತು ಕಾರ್ಖಾನೆ ಕಛೇರಿಯ ಸೂಚನಾ ಫಲಕದಲ್ಲಿ |

ಸಹಿ/- (ಮಂಜುಳ ಎಸ್.)
ರಿಟರ್ನಿಂಗ್ ಅಧಿಕಾರಿ
ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ, ದಾವಣಗೆರೆ ತಾ|| ಜಿ||
ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ದಾವಣಗೆರೆ ಉಪವಿಭಾಗ, ದಾವಣಗೆರೆ.

ಸ್ಥಳ: ದೊಡ್ಡಬಾತಿ
ದಿನಾಂಕ: 19-10-2024


# ನ.29ಕ್ಕೆ ಹೆಳವನಕಟ್ಟೆ ಲಕ್ಷ್ಮಿ ರಂಗನಾಥ ಸ್ವಾಮಿ ಕೆರೆಯಲ್ಲಿ ತೆಪ್ಪೋತ್ಸವ



ಮಲೇಬೆನ್ನೂರು, ಅ.23- ಭರ್ತಿಯಾಗಿ ಕೋಡಿ ಬಿದ್ದಿರುವ ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಐತಿಹಾಸಿಕ ಕೆರೆಯಲ್ಲಿ ಬರುವ ನವೆಂಬರ್ 29 ರಂದು ಅದ್ದೂರಿಯಾಗಿ ತೆಪ್ಪೋತ್ಸವ ಆಚರಿಸಲು ಬುಧವಾರ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ತೆಪ್ಪೋತ್ಸವ ಆಚರಿಸುವ ಕುರಿತು ಕೊಮಾರನಹಳ್ಳಿ ಗ್ರಾಮದ ಶ್ರೀ ಲಕ್ಷ್ಮಿ ರಂಗನಾಥ ಸಮುದಾಯ ಭವನದಲ್ಲಿ ಬುಧವಾರ ಕರೆದಿದ್ದ ಕೊಮಾರನಹಳ್ಳಿ ಗ್ರಾಮಸ್ಥರ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಗ್ರಾಮಸ್ಥರ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು.

ನ.29ರ ಸಂಜೆ ದೇವಸ್ಥಾನದಲ್ಲಿ ಕಾರ್ತಿಕ ದೀಪೋತ್ಸವ ಮತ್ತು ಕೆರೆಯಲ್ಲಿ ತೆಪ್ಪೋತ್ಸವ ಸೇರಿದಂತೆ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದು ಸುರೇಶ್ ಶಾಸ್ತ್ರಿ ತಿಳಿಸಿದರು.

ಈ ವಿಶೇಷ ಕಾರ್ಯಕ್ರಮಕ್ಕೆ ಕೊಮಾರನಹಳ್ಳಿ, ಮಲೇಬೆನ್ನೂರು, ಹಾಲಿವಾಣ, ಹರಳಹಳ್ಳಿ, ದಿಬ್ಬದಹಳ್ಳಿ, ಕೊಪ್ಪ, ಯಕ್ಕನಹಳ್ಳಿ, ತಿಮ್ಲಾಪುರ ಸೇರಿದಂತೆ ಮತ್ತಿತರೆ ಗ್ರಾಮಗಳಿಂದ ದೇವರುಗಳನ್ನು ಕರೆತರುವ ಬಗ್ಗೆ ತೀರ್ಮಾನಿಸಲಾಗಿದೆ. ತೆಪ್ಪೋತ್ಸವಕ್ಕೆ 15 ರಿಂದ 20 ಲಕ್ಷ ರೂ. ಅಂದಾಜು ಖರ್ಚು ಬರಬಹುದು. ಇದರಲ್ಲೇ ಅನ್ನ ಸಂತರ್ಪಣೆ ಸೇರಿದಂತೆ ಎಲ್ಲವನ್ನೂ ಒಳಗೊಂಡಿರುತ್ತದೆ ಎಂದು ಸುರೇಶ್ ಶಾಸ್ತ್ರಿ ವಿವರಿಸಿದರು.

ಗ್ರಾಮದ ರಾಮಣ್ಣ ಸ್ವಾಮಿ ಅವರು, 2009ರಲ್ಲಿ ತೆಪ್ಪೋತ್ಸವ ಆಚರಣೆ ಮಾಡಿದಾಗ 85 ಸಾವಿರ ರೂ.ಗಳು ಉಳಿದಿತ್ತು. ಈಗ ಆ ಹಣ 1.45 ಲಕ್ಷ ರೂ.ಗಳಾಗಿವೆ. ಈ ವರ್ಷದ ತೆಪ್ಪೋತ್ಸವಕ್ಕೆ ಸುಮಾರು 20 ಸಾವಿರ ಜನ ಸೇರುವ ನಿರೀಕ್ಷೆಯಿದ್ದು, ವೈಭವದಿಂದ ಉತ್ಸವ ಆಚರಿಸೋಣ ಎಂದರು.

ಕೆರೆ ಸುತ್ತಲು ವಿದ್ಯುತ್ ಅಲಂಕಾರ, ತೆಪ್ಪೋತ್ಸವ ಕುರಿತು ಎಲ್ಲಾ ಕಡೆಗಳಲ್ಲಿ ಫ್ಲೆಕ್ಸ್ ಹಾಕಿಸಬೇಕೆಂದು ಗ್ರಾಮದ ಐರಣಿ ಮಹೇಶ್ವರಪ್ಪ ಹೇಳಿದರು. ಗ್ರಾಮದ ಐರಣಿ ಅಣ್ಣಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಭೆಯಲಿದ್ದ ಅನೇಕರು ದವಸ - ಧಾನ್ಯ, ಹಣ ನೀಡುವ ಭರವಸೆ ನೀಡಿದರು.

ಹಾಲಿವಾಣದ ಎಸ್.ಜಿ.ಪರಮೇಶ್ವರಪ್ಪ, ಹನಗವಾಡಿ ವೀರೇಶ್, ಹಿಂಡಸಘಟ್ಟ ಲಿಂಗರಾಜ್, ಮಲೇಬೆನ್ನೂರಿನ ಮುದೇಗೌಡ್ರ ತಿಪ್ಪೇಶ್, ಕೆ.ಜಿ.ಪರಮೇಶ್ವರಪ್ಪ, ಬೆಣ್ಣೆಹಳ್ಳಿ ಸಿದ್ದೇಶ್, ಪಿ.ಆರ್.ರಾಜು, ಉಡೇದರ್ ಸಿದ್ದೇಶ್, ಬಟ್ಟೆ ಅಂಗಡಿ ವಿಶ್ವ, ಎ.ಕೆ.ಲೋಕೇಶ್, ಬೆಣ್ಣೆಹಳ್ಳಿ ಬಸವರಾಜ್, ಹರಳಹಳ್ಳಿ ಶ್ರೀನಿವಾಸ್, ಗ್ರಾಮದ ಮಡಿವಾಳರ ಬಸವರಾಜ್, ಹನುಮಂತು, ಐ.ಪಿ.ರಂಗನಾಥ್, ಎಸ್.ಡಿ.ರಂಗನಾಥ್, ಎಸ್.ಹೆಚ್.ಹಾಲೇಶ್, ಹೋಟೆಲ್ ಪರಮೇಶ್ವರಪ್ಪ, ಐರಣಿ ಮೂರ್ತಿ, ಗಿರಳ್ಳಿ ರಾಜಪ್ಪ, ಸಿ.ರಂಗಣ್ಣ, ದಾನಪ್ಪ ಅರುಣ್, ಪರಮೇಶ್ ನಾಯ್ಕ, ಯು.ನಾಗಪ್ಪ, ಪಿಗ್ಮಿ ರಾಮಣ್ಣ, ದೇವಸ್ಥಾನದ ಧರ್ಮಾಚಾರ್, ದಿಬ್ಬದಹಳ್ಳಿಯ ಬಸಪ್ಪಗೌಡ್ರು, ಹಾಲಿವಾಣದ ಮೋಹನ್, ಚಿಕ್ಕಣ್ಣ, ಸಂತೋಷ್, ಹನುಮಗೌಡ, ಕೊಪ್ಪದ ಚಂದ್ರಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಹೆಚ್ಚು ಮಳೆ: ಎಚ್ಚರಿಕೆಯಿಂದ ಕೆಲಸ ಮಾಡಬೇಕು

## ಜನ, ಜಾನುವಾರುಗಳಿಗೆ ತೊಂದರೆಯಾಗದಂತೆ ಕೆಲಸ ಮಾಡಲು ಶಾಸಕ ಹರೀಶ್ ಸೂಚನೆ

ಹರಿಹರ, ಅ.23- ತಾಲ್ಲೂಕಿನಲ್ಲಿ ನಿರೀಕ್ಷೆಗೂ ಮೀರಿ ಮಳೆ ಆಗಿರುವುದರಿಂದ ಜನ ಮತ್ತು ಜಾನುವಾರುಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳಿ ಎಂದು ವಿವಿಧ ಇಲಾಖೆಯ ಅಧಿಕಾರಿಗಳಿಗೆ ಶಾಸಕ ಬಿ.ಪಿ.ಹರೀಶ್ ಸೂಚಿಸಿದರು.

ನಗರದ ತಾ.ಪಂ. ಕಚೇರಿ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕೆ.ಡಿ.ಪಿ. ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರದ ಪ್ರಮುಖ ವೃತ್ತಗಳು, ಗ್ರಾಮಗಳ ರಸ್ತೆಗಳು, ಸೇತುವೆಗಳು ಹಾಳಗಿವೆ. ಅವುಗಳನ್ನು ತ್ವರಿತವಾಗಿ ದುರಸ್ತಿ ಪಡಿಸಲು ಲೋಕೋಪಯೋಗಿ ಪಂಚಾಯತ್ ರಾಜ್, ಲ್ಯಾಂಡ್ ಆರ್ಮಿ ಇಲಾಖೆಯ ಅಧಿಕಾ ರಿಗಳು ಮುಂದಾಗಬೇಕು ಎಂದರು.

ಅಂಗನವಾಡಿ ಕೇಂದ್ರಗಳಿಗೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ನೀಡಬೇಕು ಎಂದೂ ಸೂಚಿಸಿದ ಶಾಸಕರು, ತಾಲ್ಲೂಕಿನ ಬಿಳಸನೂರು ಆರೋಗ್ಯ ಕೇಂದ್ರದ ವೈದ್ಯರನ್ನು ಬೇರೆ ಕಡೆಗೆ ನಿಯೋಜಿಸಿ ಬೇರೆ ವೈದ್ಯರನ್ನು ನೇಮಕ ಮಾಡುವಂತೆ ಹೇಳಿದರು.

ಗ್ರಾಮ ಠಾಣಾ ವಿಸ್ತರಣೆ ಆಗದೇ ಇರುವುದರಿಂದ ಜನತಾ ಮನೆಗಳಿಗೆ ಮತ್ತು ಆಶ್ರಯ ಬಡಾವಣೆಯಲ್ಲಿ ವಾಸಿಸುತ್ತಿರುವ ಬಹಳಷ್ಟು ಬಡವರಿಗೆ ತೊಂದರೆ ಆಗುತ್ತಿದ್ದು, ತಹಶೀಲ್ದಾರ್, ಇಓ, ವಿಎ, ಕಾರ್ಯದರ್ಶಿ, ಪಿಡಿಓ ಸೇರಿದಂತೆ ಇತರೆ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆಯನ್ನು ಪರಿಹರಿಸಲು ಮುಂದಾಗಬೇಕು. ಈ ಹಿನ್ನಲೆಯಲ್ಲಿ ಆದ್ದರಿಂದ ಮತ್ತೊಮ್ಮೆ ಶೀಘ್ರದಲ್ಲೇ ಸಭೆ ಕರೆವಂತೆ ಕರೆಯುವಂತೆ ತಿಳಿಸಿದರು.



### ಪರಿಹಾರ ಮೊತ್ತ ಹೆಚ್ಚಿಸಲು ಹರೀಶ್ ಆಗ್ರಹ

**ಸರ್ಕಾರ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡುತ್ತಿರುವುದರಿಂದ ಅನುದಾನವಿಲ್ಲದೆ ಅಭಿವೃದ್ಧಿ ಕಾರ್ಯಗಳೇ ಕನಸಾಗಿವೆ ಎಂದು ಶಾಸಕ ಹರೀಶ್ ಅಸಮಾಧಾನ ವ್ಯಕ್ತಪಡಿಸಿದರು. ಮಳೆಯಿಂದ ಹಾನಿ ಉಂಟಾದಾಗ ನೀಡಬೇಕಾದ ಪರಿಹಾರದ ಮೊತ್ತವನ್ನು ಸರ್ಕಾರ ಹೆಚ್ಚಿಸಬೇಕು ಎಂದವರು ಆಗ್ರಹಿಸಿದರು.**

ತಹಶೀಲ್ದಾರ್ ಗುರುಬಸವರಾಜ್ ಮಾತನಾಡಿ, ಡಿ.ಆರ್.ಎಂ. ಶಾಲೆ ಶಿಥಿಲ ಕೊಠಡಿಯಲ್ಲಿ ಗುಣಮಟ್ಟದ ವಸ್ತುಗಳು ಇರುವುದರಿಂದ ಟೆಂಡರ್ ಪ್ರಕ್ರಿಯೆ ಮೂಲಕ ತೆರವುಗೊಳಿಸುವಂತೆ ಹೇಳಿದರು.

ಕೆಡಿಪಿ ನಾಮನಿರ್ದೇಶನ ಸದಸ್ಯ ಮಲ್ಲೇಶ್ ಕಮಲಾಪುರ ಮಾತನಾಡಿ, ತಾಲ್ಲೂಕಿನಲ್ಲಿ ಅಕ್ರಮ ಅಕ್ಕಿ ಸಾಗಾಟ ಹೆಚ್ಚಾಗಿದ್ದು, ಆಹಾರ ಇಲಾಖೆಯ ಅಧಿಕಾರಿಗಳು ಕಡಿವಾಣ ಹಾಕಬೇಕು ಎಂದರು.

ಕೃಷಿ ಇಲಾಖೆ ನಾರನಗೌಡ ಮಾತನಾಡಿ, ಹೆಚ್ಚಿನ ಮಳೆಯಿಂದಾಗಿ ಉಂಟಾಗುವ ನಷ್ಟವನ್ನು ತಪ್ಪಿಸಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ಬಿಇಓ ಡಿ. ದುರ್ಗಪ್ಪ ಮಾತನಾಡಿ, ಕಳೆದ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶ ಜಿಲ್ಲೆಯಲ್ಲಿ ಕೊನೆಯ ಸ್ಥಾನಕ್ಕೆ ಬಂದಿದ್ದರಿಂದ ಈ ಬಾರಿ ವಿದ್ಯಾರ್ಥಿಗಳಿಗೆ ಸಾಕಷ್ಟು ತರಗತಿಯ ವ್ಯವಸ್ಥೆ ಮೂಲಕ ಫಲಿತಾಂಶ ಹೆಚ್ಚು ಬರುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮಗಳನ್ನು ಶಿಕ್ಷಣ ಇಲಾಖೆ ಕೈಗೊಂಡಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗೋವಿನಾಳ ರಾಜಣ್ಣ, ಬಿಳಸನೂರು ನರೇಂದ್ರ, ಶಿಲ್ಪಾ ಕುಬೇರಪ್ಪ, ಜಬಿಉಲ್ಲಾ, ಕೊಟ್ರೇಶ್ ನಾಯ್ಕ್, ಅಧಿಕಾರಿಗಳಾದ ತಹಶೀಲ್ದಾರ್ ಗುರುಬಸವರಾಜ್, ತಾ.ಪಂ. ಇಓ ಸುಮಲತಾ, ನಾರನಗೌಡ, ಸಿದ್ದೇಶ್, ಪೂರ್ಣಿಮಾ, ಡಿ. ದುರ್ಗಪ್ಪ, ರಾಮಕೃಷ್ಣಪ್ಪ, ಶಶಿಧರಯ್ಯ, ಮಾರ್ಕಂಡೇಯ, ಹನುಮನಾಯ್ಕ್, ಶಶಿಕುಮಾರ್, ಕವಿತಾ, ಅಬ್ದುಲ್ ಖಾದರ್, ಅಮೃತ, ಮಂಜುನಾಥ್, ಕವಿತಾ, ಹನುಮಂತಪ್ಪ, ತಾಪಂ ಲಿಂಗರಾಜ್, ಕರಿಬಸಪ್ಪ, ಉಮೇಶ್ ಇತರರು ಹಾಜರಿದ್ದರು.

# ಹರಪನಹಳ್ಳಿ : ಕನ್ನಡ ಜ್ಯೋತಿ ರಥಕ್ಕೆ ಸ್ವಾಗತ



ಹರಪನಹಳ್ಳಿ, ಅ.23- ಮಂಡ್ಯದಲ್ಲಿ ಬರುವ ಡಿಸೆಂಬರ್ 20ರಿಂದ ಮೂರು ದಿನಗಳವರೆಗೆ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಮಿತ್ತ ರಾಜ್ಯದಾದ್ಯಂತ ಸಂಚರಿಸುತ್ತಿರುವ ಕನ್ನಡ ಜ್ಯೋತಿ ರಥವು ಇಂದು ಹರಪನಹಳ್ಳಿಗೆ ಆಗಮಿಸಿತು.

ರಥಕ್ಕೆ ಹರಪನಹಳ್ಳಿ ತಾಲ್ಲೂಕು ಆಡಳಿತ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳಿಂದ ಅದ್ಧೂರಿಯಾಗಿ ಸ್ವಾಗತಿಸಲಾಯಿತು.

ತಾಲ್ಲೂಕಿನ ಗಡಿಭಾಗ ಕಾನಹಳ್ಳಿಯಲ್ಲಿ ರಥಕ್ಕೆ ಪೂಜೆ ಸಲ್ಲಿಸಿದ ನಂತರ ಕೂಲಹಳ್ಳಿ ಮಾರ್ಗವಾಗಿ ಹರಪನಹಳ್ಳಿ ಪಟ್ಟಣದ ಪ್ರವಾಸಿ ಮಂದಿರದ ವೃತ್ತದಲ್ಲಿ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಅವರು ತಾಯಿ ಭುವನೇಶ್ವರಿ ಮೂರ್ತಿಗೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು.

ತಹಶೀಲ್ದಾರ್ ಗಿರೀಶ್‌ಬಾಬು, ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಮಾಜಿ ಅಧ್ಯಕ್ಷರಾದ ಎಚ್.ಮಲ್ಲಿಕಾರ್ಜುನ, ಕಾರ್ಯದರ್ಶಿ ಜಿ. ಮಹಾದೇವಪ್ಪ, ಖಜಾಂಚಿ ಕೆ.ರಾಘವೇಂದ್ರ ಶೆಟ್ಟಿ, ಕ.ರ.ವೇ. ತಾಲ್ಲೂಕು ಅಧ್ಯಕ್ಷ ಗಿರಜ್ಜಿ ನಾಗರಾಜ್, ನಂದೀಶ ಆಚಾರಿ, ಕೆ.ನಂದೀಶ್, ಅಶೋಕ್, ಸಾಹಿತಿ ಮಾಡ್ಲಗೇರಿ ಸುಭದ್ರಮ್ಮ ಪ್ರಭಾವತಿ ಕೃಷ್ಣಪ್ಪ, ಇಸ್ಮಾಯಿಲ್ ಎಲಿಗಾರ್, ಪೂಜಾರ್ ಬಸವರಾಜ್, ಜಿಟ್ಟಿನಕಟ್ಟಿ ಎಚ್.ಕೆ.ಮಂಜುನಾಥ್, ಪುರಸಭೆ ಸದಸ್ಯರಾದ ಎಂ.ವಿ. ಅಂಜಿನಪ್ಪ, ಲಾಟಿ ದಾದಾಪೀರ್, ಉದ್ದಾರ್ ಗಣೇಶ, ಜಾಕೀರ್, ಟಿ.ವೆಂಕಟೇಶ್, ಮುಖಂಡರಾದ ಚಿಕ್ಕೇರಿ ಬಸಪ್ಪ, ಅರಸಿಕೇರಿ ಜಾವೀದ್, ಪ್ರಕಾಶಗೌಡ್ರು, ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಇಬ್ರಾಹಿಂ ಸಾಬ್, ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಲೇಪಾಕ್ಷಪ್ಪ ಸೇರಿದಂತೆ ಇತರರು ಇದ್ದರು.

# ಐ.ಎಂ.ಎ. ಮಹಿಳಾ ವಿಭಾಗದಿಂದ ಧ್ಯಾನ ಶಿಬಿರ



ದಾವಣಗೆರೆ, ಅ.23- ನಗರದ ಐ.ಎಮ್.ಎ. ಮಹಿಳಾ ವಿಭಾಗದ ಕಾರ್ಯಕ್ರಮದಲ್ಲಿ ಶ್ರೀಮತಿ ವಿದ್ಯಾಸಿದ್ದೇಶ್ವರನ್ ಫಿಜಿಯೋಥೆರಪಿಸ್ಟ್ ಅವರು ಮೆಡಿಟೇಷನ್ (ಧ್ಯಾನ) ಬಗ್ಗೆ ವಿವರಣೆ ನೀಡಿದರು. ವೇದಿಕೆಯಲ್ಲಿ ಅಧ್ಯಕ್ಷರಾದ ತ್ರಿವೇಣಿ ಮಲ್ಲೇಶ್, ಕಾರ್ಯದರ್ಶಿ ಶಿವಪ್ರಭ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಪುಷ್ಪ ಪಂಚಣ್ಣ, ಮಮತಾ ಬಸವರಾಜ್, ಅಶ್ವಿನಿ ಮಂಜುನಾಥ್, ಸುಧಾ ವಿಶ್ವನಾಥ್, ಕವಿತಾ ಮಂಜುನಾಥ್ ನಡೆಸಿಕೊಟ್ಟರು.

# ಪೇಟಿಎಂ ಹೊಸ ಗ್ರಾಹಕರ ಸೇರ್ಪಡೆಗೆ ಅನುಮತಿ

ನವದೆಹಲಿ, ಅ. 23 - ಪೇಟಿಎಂ ಹೊಸ ಯು.ಪಿ.ಐ. ಬಳಕೆದಾರರನ್ನು ಸೇರ್ಪಡೆ ಮಾಡಿಕೊಳ್ಳಲು ರಾಷ್ಟ್ರೀಯ ಪಾವತಿಗಳ ಆಯೋಗ (ಎನ್.ಪಿ.ಸಿ.ಐ.) ಒಪ್ಪಿಗೆ ನೀಡಿದೆ. ಪೇಟಿಎಂ ಹೊಸ ಯುಪಿಐ ಗ್ರಾಹಕರನ್ನು ಸೇರ್ಪಡೆ ಮಾಡಿಕೊಳ್ಳುವುದರ ಮೇಲೆ ಈ ವರ್ಷದ ಆರಂಭದಲ್ಲಿ ರಿಸರ್ವ್ ಬ್ಯಾಂಕ್ ನಿರ್ಬಂಧ ಹೇರಿತ್ತು. ಇದರಿಂದ ಕಂಪನಿಗೆ ಹಿನ್ನಡೆಯಾಗಿತ್ತು.

# ಬೈಜುಸ್ ದಿವಾಳಿ ಪ್ರಕ್ರಿಯೆಗೆ ಸುಪ್ರೀಂ ಕೋರ್ಟ್ ಅಸ್ತು

ನವದೆಹಲಿ, ಅ23 - ಬೈಜುಸ್ ಎಜುಟೆಕ್ ಕಂಪನಿಯ ದಿವಾಳಿ ಪ್ರಕ್ರಿಯೆ ಮೇಲೆ ವಿಧಿಸಲಾಗಿದ್ದ ನಿರ್ಬಂಧವನ್ನು ಸುಪ್ರೀಂ ಕೋರ್ಟ್ ತೆರವುಗೊಳಿಸಿದೆ. ರಾಷ್ಟ್ರೀಯ ಕಂಪನಿಗಳ ಕಾನೂನು ಮೇಲ್ಮನವಿ ಟ್ರಿಬ್ಯೂನಲ್ (ಎನ್.ಸಿ.ಎಲ್.ಎ.ಟಿ.) ಬೈಜುಸ್ ವಿರುದ್ಧದ ದಿವಾಳಿ ಪ್ರಕ್ರಿಯೆಗೆ ತಡೆಯಾಜ್ಞೆ ಹೊರಡಿಸಿತ್ತು.

ಬೈಜುಸ್ ಕಂಪನಿಗೆ ಸಾಲ ನೀಡಿದ್ದ ಅಮೆರಿಕದ ಗ್ಲಾಸ್ ಟ್ರಸ್ಟ್ ಕಂಪನಿ ಎಲ್.ಎಲ್.ಸಿ.ಯು ದಿವಾಳಿ ಪ್ರಕ್ರಿಯೆಗೆ ಅರ್ಜಿ ದಾಖಲಿಸಿತ್ತು.

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿ.ಸಿ.ಸಿ.ಐ.)ಗೆ 158.9 ಕೋಟಿ ರೂ. ಗಳನ್ನು ಬೈಜುಸ್ ಪಾವತಿಸಲು ಎನ್.ಸಿ.ಎಲ್.ಎ.ಟಿ. ಅನುಮತಿ ನೀಡಿತ್ತು. ಸುಪ್ರೀಂ ಕೋರ್ಟ್ ಆದೇಶದಿಂದ ಬಿ.ಸಿ.ಸಿ.ಐ.ಗೂ ಹಿನ್ನಡೆಯಾಗಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯ ಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯ ಮೂರ್ತಿಗಳಾದ ಜೆ.ಬಿ. ಪರ್ಡಿವಾಲಾ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ಬೈಜುಸ್ ವಿರುದ್ಧದ ದಿವಾಳಿ ಪ್ರಕ್ರಿಯೆ ಮುಂದುವರೆಸಲು ಅನುಮತಿ ನೀಡಿದೆ. ಅಲ್ಲದೇ, ಕ್ರಿಕೆಟ್ ಮಂಡಳಿಯು 158.9 ಕೋಟಿ ರೂ.ಗಳ ಇತ್ಯರ್ಥ ಮೊತ್ತವನ್ನು ಸಾಲಗಾರರ ಸಮಿತಿಗೆ ನೀಡಬೇಕು ಎಂದು ತಿಳಿಸಲಾಗಿದೆ.

ಸುಪ್ರೀಂ ಕೋರ್ಟ್ ತೀರ್ಪಿನ ಕಾರಣದಿಂದಾಗಿ ಬೈಜುಸ್ ಕಂಪನಿಯ ಮೇಲೆ ಬೈಜು ರವೀಂದ್ರನ್ ಹಾಗೂ ಅವರ ಸಹೋದರ ರಿಜು ರವೀಂದ್ರನ್ ಹೊಂದಿರುವ ನಿಯಂತ್ರಣ ಅಂತ್ಯವಾಗಲಿದೆ.

2019ರಲ್ಲಿ ಬೈಜುಸ್ ಕಂಪನಿಯು ಭಾರತೀಯ ಕ್ರಿಕೆಟ್ ತಂಡದ ಪ್ರಾಯೋಜಕತ್ವ ಪಡೆದಿತ್ತು. ದ್ವಿಪಕ್ಷೀಯ ಪಂದ್ಯಗಳಿಗೆ 4.61 ಕೋಟಿ ರೂ. ಹಾಗೂ ಐ.ಸಿ.ಸಿ. ಪಂದ್ಯಗಳಿಗೆ 1.51 ಕೋಟಿ ರೂ. ಪಾವತಿಸಲಾಗುತ್ತಿತ್ತು.

# ರೇಡಿಯೋ ಕೇಂದ್ರಕ್ಕೆ ಎ.ಐ. ಸುದ್ದಿ ವಾಚಕ

ವಾರ್ಸಾ, ಅ. 23 - ಪೋಲ್ಯಾಂಡ್ ರೇಡಿಯೋ ಕೇಂದ್ರವೊಂದು ತನ್ನ ಪತ್ರಕರ್ತರನ್ನು ವಜಾಗೊಳಿಸಿ, ಕೃತಕ ಬುದ್ಧಿವಂತಿಕೆ ಆಧಾರಿತ ಸುದ್ದಿವಾಚಕರನ್ನು ನೇಮಿಸಿದೆ.

ಒ.ಎಫ್.ಎಫ್. ರೇಡಿಯೋ ಕ್ರಾಕೊವ್ ಈ ನಿರ್ಧಾರ ತೆಗೆದುಕೊಂಡಿದ್ದು, ವರ್ಚ್ಯುಯಲ್ ಎ.ಐ. ಪಾತ್ರಧಾರಿಗಳ ಮೂಲಕ ಸುದ್ದಿ ಪ್ರಸಾರ ಮಾಡುವುದಾಗಿ ಹೇಳಿದೆ. ಇದಕ್ಕಾಗಿ ಮೂರು ಸ್ವಭಾವದ ಎ.ಐ. ಅವತಾರಗಳನ್ನು ರೂಪಿಸಲಾಗಿದೆ.

### ಭದ್ರಾ ಜಲಾಶಯ

ನೀರಿನ ಮಟ್ಟ : 186 ಅಡಿ
ಒಳ ಹರಿವು : 5278 ಕ್ಯೂಸೆಕ್ಸ್,
ಹೊರ ಹರಿವು : 5278 ಕ್ಯೂಸೆಕ್ಸ್
ಕಳೆದ ವರ್ಷ : 156 ಅಡಿ

# ಕಾಸಲ್ ಅಮರ್‌ನಾಥ್ ಅವರಿಗೆ ಪ್ರಶಸ್ತಿ



ದಾವಣಗೆರೆ, ಅ. 23- ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ (ಶಿವಮೊಗ್ಗ), ಕೃಷಿ ಹಾಗೂ ಕೃಷಿ ಸಂಬಂಧಿತ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಶಿವಮೊಗ್ಗದಲ್ಲಿ ಈಚೆಗೆ ನಡೆದ ಕೃಷಿ - ತೋಟಗಾರಿಕೆ ಮೇಳ - 2024 ಪೌಷ್ಟಿಕ ಆಹಾರಕ್ಕಾಗಿ ವಿಕಸಿತ ಕೃಷಿ ಕಾರ್ಯಕ್ರಮದಲ್ಲಿ ನಗರದ ಕಾಸಲ್ ಗಿರ್ ಫಾರ್ಮ್ಸ್‌ನ ಕಾಸಲ್ ಅಮರ್‌ನಾಥ್ ಅವರಿಗೆ ಸಚಿವ ಮಧು ಬಂಗಾರಪ್ಪ ಅವರು ಪ್ರಶಸ್ತಿ ನೀಡಿ ಗೌರವಿಸಿದರು.

ಉತ್ತಮ ದೇಸಿ ಗಿರ್ ಹಸುಗಳನ್ನು ಮಾದರಿಯಾಗಿ ಸಾಕಾಣಿಕೆ ಮಾಡುವುದನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ. ಕಾಸಲ್ ಅಮರ್‌ನಾಥ್ ಅವರು, ಕಳೆದ 20 ವರ್ಷಗಳಿಂದ ದಾವಣಗೆರೆ ತಾಲ್ಲೂಕಿನ ಹುಣಸೆಕಟ್ಟೆ ಮಂಡ್ಲೂರಿನಲ್ಲಿ ಕಾಸಲ್ ಗಿರ್ ಫಾರ್ಮ್ಸ್ ಅನ್ನು ಸಾವಯವ ರೀತಿಯಿಂದ ನಡೆಸಿಕೊಂಡು ಬರುತ್ತಿದ್ದು, ಇವರ ಈ ಕಾರ್ಯಕ್ಕೆ ಪ್ರಶಸ್ತಿ ದೊರೆತಿದೆ.

# ಕಾಡಜ್ಜಿಯಲ್ಲಿ 29 ರಂದು ಸುಸ್ಥಿರ ಕೃಷಿ ತರಬೇತಿ

ದಾವಣಗೆರೆ, ಅ.23- ಕಾಡಜ್ಜಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಇದೇ ದಿನಾಂಕ 29 ರಂದು ಜಿಲ್ಲೆಯ ರೈತರಿಗೆ ಸುಸ್ಥಿರ ಕೃಷಿ-ಸ್ವಾವಲಂಬಿ ಜೀವನಕ್ಕಾಗಿ ನೂತನ ತಾಂತ್ರಿಕತೆಗಳ ಕುರಿತು ತರಬೇತಿ ಆಯೋಜಿಸಲಾಗಿದೆ.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರಗತಿ ಪರ ರೈತರಾದ ಹುಲಿಕೆರೆಯ ವಿಶ್ವೇಶ್ವರ ಹೆಚ್. ಸಜ್ಜನ್, ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಗಳಾದ ಡಾ.ದೇವರಾಜ್ ಟಿ. ಎನ್., ಮಲ್ಲಿಕಾರ್ಜುನ ಬಿ.ಓ, ಬಸವನಗೌಡ ಎಂ.ಜಿ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವರು.

ಇಲಾಖೆಯಿಂದ ದೊರೆಯುವ ಯೋಜನೆಗಳ ಕುರಿತು ಉಪ ಕೃಷಿ ನಿರ್ದೇಶಕ ಆರ್. ತಿಪ್ಪೇಸ್ವಾಮಿ ಮಾಹಿತಿ ನೀಡುವರು. 35 ರೈತರಿಗೆ ಮಾತ್ರ ಭಾಗವಹಿಸುವ ಅವಕಾಶವಿದೆ. ಆಸಕ್ತ ರೈತ, ರೈತ ಮಹಿಳೆಯರು ಅ.26 ರೊಳಗಾಗಿ ಮೊ.ಸಂಖ್ಯೆ: 9844295795, 9901640184 ಗೆ ಸಂಪರ್ಕಿಸಲು ಕಾಡಜ್ಜಿಯ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ಉದ್ಯೋಗ ವಿವರ ಸಲ್ಲಿಸಲು ಸೂಚನೆ

ದಾವಣಗೆರೆ, ಅ. 23 - ಜಿಲ್ಲೆಯ ಎಲ್ಲಾ ನಿಯೋಜಕರು, ಕಂಪನಿಗಳು, ಕಾರ್ಖಾನೆಗಳು, ಸಂಘ, ಸಂಸ್ಥೆಗಳು, ಹೋಟೆಲ್‌ಗಳು, ಲಾಡ್ಜ್‌ಗಳು, ಆಟೋ ಮೊಬೈಲ್, ಶೋ ರೂಂಗಳು ಸೇರಿದಂತೆ ಎಲ್ಲಾ ರೀತಿಯ ದೊಡ್ಡ ದೊಡ್ಡ ಅಂಗಡಿಗಳು, ಉದ್ದಿಮೆಗಳು ಕಡ್ಡಾಯವಾಗಿ ಸ್ಥಳೀಯ ಉದ್ಯೋಗ ವಿನಿಮಯ ಕೇಂದ್ರಕ್ಕೆ ತಮ್ಮಲ್ಲಿರುವ ಹುದ್ದೆಗಳ ವಿವರವನ್ನು ಸಲ್ಲಿಸಬೇಕು ಎಂದು ಉದ್ಯೋ ಗಾಧಿಕಾರಿ ರವೀಂದ್ರ ತಿಳಿಸಿದ್ದಾರೆ. ಖಾಲಿ ಇರುವ ಹುದ್ದೆಗಳ ವಿವರ ಹಾಗೂ ಖಾಲಿ ಹುದ್ದೆಗಳ ಭರ್ತಿಗೆ ಮುನ್ನ ಆ ಹುದ್ದೆಗಳನ್ನು ಸ್ಥಳೀಯ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗೆ ಅಧಿಸೂಚಿ ಸುವುದು ಕಡ್ಡಾಯ. ನಿಗದಿತ ನಮೂನೆ ಇ.ಆರ್-1ರಲ್ಲಿ ಕಡ್ಡಾ ಯವಾಗಿ ಪ್ರತಿ ತ್ರೈಮಾಸಿಕಾಂತ್ಯಕ್ಕೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿ ಗಾಗಿ ಉದ್ಯೋಗಾಧಿಕಾರಿಗಳು ಅಥವಾ ಕಚೇರಿಯ ದೂ.ಸಂ :08192-259446 ಗೆ ಸಂಪರ್ಕಿಸಲು ತಿಳಿಸಿದ್ದಾರೆ.

# ಜಗಳೂರು : ಐಟಿಐ ಪ್ರವೇಶಕ್ಕೆ ಅರ್ಜಿ

ಜಗಳೂರು, ಅ.23- ಇಲ್ಲಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಐಟಿಐ ಕೋರ್ಸ್‌ಗಳಲ್ಲಿ ಖಾಲಿ ಇರುವ ಸ್ಥಾನಗಳ ಪ್ರವೇಶಕ್ಕಾಗಿ ಎಸ್‌ಎಸ್ ಎಲ್‌ಸಿ ಪಾಸಾದ ಅಭ್ಯರ್ಥಿಗಳಿಂದ ನೇರ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಪ್ರವೇಶಕ್ಕಾಗಿ ಇದೇ ದಿನಾಂಕ 30 ರವರೆಗೆ ಆಫ್‌ಲೈನ್ ಮೂಲಕ ಪ್ರವೇಶ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 08196-227110 ಸಂಪರ್ಕಿಸಲು ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

## ಸೌಜನ್ಯ ಎನ್. ಅವರಿಗೆ ಪಿ.ಹೆಚ್.ಡಿ.



ದಾವಣಗೆರೆ ವಿದ್ಯಾನಗರ ನಿವಾಸಿ
ದಿ. ಶ್ರೀಮತಿ ಬಿ.ಕೆ. ಯಶೋಧಮ್ಮ, ನಿವೃತ್ತ ಶಿಕ್ಷಕರು, ದಿ. ಕೆ. ನಾಗರಾಜ್ ಎಸ್.ಬಿ.ಎಂ. ಉದ್ಯೋಗಿ ಇವರ ಸುಪುತ್ರಿ ಹಾಗೂ
ವಿನಯ್ ಸಿ. ತೆರಿಗೆ ಸಲಹೆಗಾರರು ಇವರ ಧರ್ಮಪತ್ನಿ
ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿರುವ
**ಶ್ರೀಮತಿ ಸೌಜನ್ಯ ಎನ್.** ಇವರು
ದಾವಣಗೆರೆ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗದ ಹಿರಿಯ ಪ್ರಾಧ್ಯಾಪಕರಾದ
**ಡಾ. ಜೆ.ಕೆ. ರಾಜು** B.E., MBA, Ph.D., ಇವರ



ಡಾ. ಜೆ.ಕೆ. ರಾಜು, B.E, MBA, Ph.D

ಮಾರ್ಗದರ್ಶನದಲ್ಲಿ ಮಂಡಿಸಿದ
'Behavioural Competency Mapping : -A Study with Reference to Government First Grade College Teachers Affiliated to Davangere University'
ಎಂಬ ಮಹಾಪ್ರಬಂಧಕ್ಕೆ ದಾವಣಗೆರೆ ವಿಶ್ವವಿದ್ಯಾಲಯದ ಗೌರವಾನ್ವಿತ ಉಪ ಕುಲಪತಿಗಳು **ಪಿಹೆಚ್‌ಡಿ ಪದವಿ**ಗೆ ಅರ್ಹರೆಂದು ಘೋಷಿಸಿದ್ದಾರೆ.
ಉನ್ನತ ವ್ಯಾಸಂಗ ಪಡೆದು ಶಿಕ್ಷಣದ ಉನ್ನತ ಸಾಧನೆ ಮಾಡಿರುವ ಸೌಜನ್ಯ ಎನ್. ಅವರಿಗೆ ಮಾರ್ಗದರ್ಶನ ನೀಡಿದ ಪ್ರಾಧ್ಯಾಪಕರಾದ **ಡಾ. ಜೆ.ಕೆ. ರಾಜು** ಅವರಿಗೆ ಹೃದಯ ಪೂರ್ವಕ ಕೃತಜ್ಞತೆಗಳು.

**ಶುಭ ಕೋರುವವರು :** ಪತಿ : ವಿನಯ್ ಸಿ. ತೆರಿಗೆ ಸಲಹೆಗಾರರು
ಅತ್ತೆ : ಶ್ರೀಮತಿ ಭಾರತಮ್ಮ ಚಂದ್ರಶೇಖರ್ ಮಕ್ಕಳು : ವಿಕಾಸ್ ವಿ., ಧನುಷ್ ವಿ.,
● ಶ್ರೀಮತಿ ವಿನುತ ಶಿಕ್ಷಕರು ಹಾಗೂ ರುದ್ರೇಶ್ ● ಶ್ರೀಮತಿ ಸವಿತಾ ಹಾಗೂ ವಿಜಯ್ ಸಿ.
● ಶ್ರೀಮತಿ ಅನುಸೂಯಮ್ಮ ಬಿ.ಕೆ. ನಿವೃತ್ತ ಶಿಕ್ಷಕರು, ಮುರುಗಿಸ್ವಾಮಿ, ನಿವೃತ್ತ ಅಧಿಕಾರಿ
● ಗಣೇಶ್ ಎಂ., ಸ್ಟಾರ್ ಟೆಲಿವಿಷನ್ ● ಮಹೇಶ್ ಎಂ., ಲೀಡ್ ಸಾಫ್ಟ್‌ವೇರ್ ಇಂಜಿನಿಯರ್ ಟಿಸಿಎಸ್






# ದೊಡ್ಡಬಾತಿ ಬ್ಯಾಡರ ಕೃಷ್ಣಪ್ಪ ನಿಧನ



ದೊಡ್ಡಬಾತಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರೂ,
ದಾವಣಗೆರೆ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘದ ಉಪಾಧ್ಯಕ್ಷರೂ,
ಕನ್ನಡ ಪರ ಸಂಘಟನೆಯ ಸಕ್ರಿಯ ಪದಾಧಿಕಾರಿಗಳೂ, ಸಾಹಿತಿಗಳೂ ಆದ

## ಬ್ಯಾಡರ ಕೃಷ್ಣಪ್ಪನವರು

(ದೊಡ್ಡಬಾತಿ ದಿ.ಚಿಕ್ಕಪ್ಪರ ಸಿದ್ದಪ್ಪನವರ ಪುತ್ರ)

ದಿನಾಂಕ 23.10.2024ರ ಬುಧವಾರ ಸಂಜೆ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 52 ವರ್ಷ ವಯಸ್ಸಾಗಿತ್ತು. ಪತ್ನಿ ಶ್ರೀಮತಿ ರೇಣುಕಮ್ಮ ಹಾಗೂ
ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಗುರುವಾರ ಮಧ್ಯಾಹ್ನ 12.30 ಕ್ಕೆ
ದೊಡ್ಡಬಾತಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ**

**ಜೆಸಿಬಿ ಹನುಮಂತಪ್ಪ**

ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ದೊಡ್ಡಬಾತಿ. 9964005604

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas